28 December 2025 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಒಬ್ಬ ವ್ಯಕ್ತಿಯ
ಬಡತನ ನೋಡಿ ಸಂಬಂಧವನ್ನು
ಮುರಿದುಕೊಳ್ಳಬೇಡಿ, ಬಡವರ
ಮನೆಯಲ್ಲಿರುವ ಗೌರವ ಶ್ರೀಮಂತರ
ಮನೆಯಲ್ಲಿ ಎಂದಿಗೂ ಸಿಗುವುದಿಲ್ಲ!
-ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ಬಂಗಾರದ ಪೆನ್ನು ನಿಮಗೆ
ಪಿತ್ರಾರ್ಜಿತ ಆಸ್ತಿಯಾಗಿ
ಸಿಗಬಹುದು" ಆದರೆ
ಅದರಿಂದ ಏನು
ಬರೆಯಬೇಕೆಂಬ ಜ್ಞಾನವನ್ನು
ನಾವೇ ಸಂಪಾದಿಸಬೇಕು
ಮೈಲಾರ ಸಾವಿತ್ರಿಬಾಯಿ

info.varthaman@gmail.com

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 63 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಅರಮನೆ ಭದ್ರತಾ ವೈಫಲ್ಯ ಬಯಲು

## ಸ್ಫೋಟವಾದ ಸಮೀಪದಲ್ಲಿಯೇ ಸಿಸಿ ಕ್ಯಾಮೆರಾ ಇದ್ದರೂ ದೃಶ್ಯ ಸೆರೆ ಆಗಿಲ್ಲ!

**ಮೈಸೂರು:** ವಿಶ್ವವಿಖ್ಯಾತ ಮೈಸೂರು ಅರಮನೆಯ ಜಯಮಾರ್ತಾಂಡ ದ್ವಾರದ ಬಳಿ ಹೀಲಿಯಂ ಸಿಲಿಂಡರ್ ಸ್ಫೋಟ ನಡೆದ ನಂತರ ಅರಮನೆಯ ಭದ್ರತಾ ಲೋಪ ಬಯಲಾಗಿದೆ.

ಅರಮನೆಗೆ ಪ್ರತ್ಯೇಕ ಪೊಲೀಸ್ ಠಾಣೆ ಇದೆ. ಅರಮನೆ ಭದ್ರತಾ ಮಂಡಳಿ ಇದ್ದರೂ ಭದ್ರತೆ ಏಕೆ ಬಿಗಿಯಾಗಿಲ್ಲ ಎಂದು ಸಾರ್ವಜನಿಕರು ಪ್ರಶ್ನೆ ಮಾಡುತ್ತಿದ್ದಾರೆ. ಅಲ್ಲದೆ, ಪೊಲೀಸರ ಕಣ್ತಪ್ಪಿಸಿ ಸ್ಫೋಟಕ ವಸ್ತುವನ್ನು ಅರಮನೆ ದ್ವಾರಕ್ಕೆ ತಂದಿದ್ದು ಹೇಗೆ ಎಂಬ ಪ್ರಶ್ನೆ ಎದ್ದಿದೆ.

ಅರಮನೆ ದ್ವಾರದಲ್ಲಿ ಸ್ಫೋಟ ಸಂಭವಿಸಿದ 20 ಅಡಿ ದೂರದಲ್ಲೇ 360 ಡಿಗ್ರಿ ಸುತ್ತುವ ಅಧುನಿಕ ತಂತ್ರಜ್ಞಾನದ ಸಿಸಿಟಿವಿ ಹಾಕಲಾಗಿದೆ. ಆದರೆ ಈ ಸಿಸಿಟಿವಿಯಲ್ಲಿ ಸ್ಫೋಟದ ದೃಶ್ಯ ಸೆರೆಯಾಗಿಲ್ಲ. ಮೈಸೂರು ಅರಮನೆಗೆ ವರ್ಷದಿಂದ ವರ್ಷಕ್ಕೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಿದೆ. ಹೀಗಾಗಿ ಅರಮನೆಯ ಆವರಣ ಮತ್ತು ಸುತ್ತಮುತ್ತಲಿನ ರಸ್ತೆಯಲ್ಲಿ ಸಿಸಿಟಿವಿ ಹಾಕಲಾಗಿದೆ. ಆದರೂ ಈ ಸಿಸಿಟಿವಿಯಲ್ಲಿ ಸ್ಫೋಟದ ದೃಶ್ಯ ಸೆರೆಯಾಗಿಲ್ಲ ಏಕೆ ಎಂಬ ಪ್ರಶ್ನೆಗೆ ಅರಮನೆ ಆಡಳಿತ ಮಂಡಳಿ ಉತ್ತರ ನೀಡಬೇಕಿದೆ. ಸ್ಫೋಟದ ಮೂಲಕ ಅರಮನೆಯ ಭದ್ರತಾ ವೈಫಲ್ಯ ಬಟಬಯಲಾಗಿದೆ. ಭದ್ರತೆ ವಿಚಾರದಲ್ಲಿ ಅರಮನೆ ಆಡಳಿತ ಮಂಡಳಿಯ ನಿರ್ಲಕ್ಷ್ಯದ ಬಗ್ಗೆ ಚರ್ಚೆ ನಡೆಯುತ್ತಿದೆ.

## ಹೀಲಿಯಂ ಸ್ಫೋಟ ಆಗಲ್ಲ: ಸ್ಫೋಟಕ ಬೆರಕೆ ಶಂಕೆ?

**ಮೈಸೂರು:** ಮೈಸೂರು ಅರಮನೆಯ ಜಯಮಾರ್ತಾಂಡ ದ್ವಾರದ ಬಳಿ ಹೀಲಿಯಂ ಸಿಲಿಂಡರ್ ಸ್ಫೋಟ ನಡೆದಿರುವ ಬಗ್ಗೆ ಹಲವು ಅನುಮಾನಗಳು ಹುಟ್ಟುಕೊಂಡಿವೆ. ಹೀಲಿಯಂ ಸ್ಫೋಟ ಆಗುವುದಿಲ್ಲ. ಹೀಲಿಯಂ ಜೊತೆ ಸ್ಫೋಟಗೊಳ್ಳುವಂತಹ ರಾಸಾಯನಿಕ ಬೆರಕೆ ಆಗಿರಬಹುದೇ ಎಂಬ ಅನುಮಾನ ದಟ್ಟವಾಗಿದೆ.

ಹೀಲಿಯಂ ಜಡ ಅನಿಲವಾಗಿದೆ. ಆಮ್ಲಜನಕ ಅಥವಾ ಇತರ ಅಂಶಗಳೊಂದಿಗೆ ಹೀಲಿಯಂ ಪ್ರತಿಕ್ರಿಯಿಸದ ಕಾರಣ ಅದು ಸ್ಫೋಟವಾಗುವುದಿಲ್ಲ. ಇದು ಸಂಪೂರ್ಣವಾಗಿ ದಹಿಸಲಾಗದ ಮತ್ತು ಹೆಚ್ಚು ದಹಿಸಬಲ್ಲ ಹೈಡ್ರೋಜನ್ ಬಲೂನ್‌ಗಳಿಗೆ ಹೆಚ್ಚು ಸುರಕ್ಷಿತವಾಗಿದೆ. ಈ ಕಾರಣಕ್ಕೆ ಜಾತ್ರೆಗಳಲ್ಲಿ, ಪ್ರವಾಸಿ ಸ್ಥಳಗಳಲ್ಲಿ ಹೀಲಿಯಂ ತುಂಬಿಸಿದ ಬಲೂನ್‌ಗಳನ್ನು ಮಾರಾಟ ಮಾಡಲಾಗುತ್ತದೆ.

ಹೀಲಿಯಂ ರಾಸಾಯನಿಕವಾಗಿ ಸ್ಥಿರವಾಗಿರುತ್ತದೆ ಮತ್ತು ಸುಡುವುದಿಲ್ಲ. ಇದಕ್ಕೆ ಯಲ್ಲಿರುವ ಆಮ್ಲಜನಕದೊಂದಿಗೆ ಪ್ರತಿಕ್ರಿಯಿಸಿದಾಗ ಸ್ಫೋಟ ಆಗುತ್ತದೆ. ಕೂಲಿಂಗ್ ಮತ್ತು ವೈಜ್ಞಾನಿಕ ಸಂಶೋಧನೆಗಳಲ್ಲಿ ಹೀಲಿಯಂ ಬಳಕೆ ಮಾಡಲಾಗುತ್ತದೆ. ಆದರೆ ಅರಮನೆ ದ್ವಾರದಲ್ಲಿ ಬಲೂನ್‌ಗೆ ತುಂಬುವಾಗ ಸ್ಫೋಟ ಆಗಿದ್ದು ಏಕೆ ಎಂಬ ಅನುಮಾನ ಉಂಟಾಗಿದೆ. ಈ ನಿಟ್ಟಿನಲ್ಲಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಮೈಸೂರು ಪ್ರಕರಣದಲ್ಲಿ ಹೀಲಿಯಂಗೆ ಬೇರೆ ಗ್ಯಾಸ್ ಮಿಶ್ರಣ ಮಾಡಿರುವ ಅನುಮಾನ ಮೇಲ್ನೋಟಕ್ಕೆ ವ್ಯಕ್ತವಾಗಿದೆ. ಮೂಲಗಳ ಪ್ರಕಾರ ಒಂದು ತಿಂಗಳ ಹಿಂದೆ ಸಲೀಂ ಮೈಸೂರಿಗೆ ಬಂದಿದ್ದಾನೆ. ಬಂದವನಿಗೆ ಅಷ್ಟು ಸುಲಭವಾಗಿ ಹೀಲಿಯಂ ಸಿಲಿಂಡರ್ ಸಿಕ್ಕಿದ್ದು ಹೇಗೆ ಎನ್ನುವ ಪ್ರಶ್ನೆಯೂ ಈಗ ಪುಟ 2ಕ್ಕೆ



## ಸಲೀಂ 5 ಎಕರೆ ಭೂ ಮಾಲೀಕ: ಬಲೂನ್ ಮಾರಿ, ಲಾಡ್ಜ್‌ನಲ್ಲಿ ವಾಸ!

**ಮೈಸೂರು:** ಅರಮನೆ ಆವರಣದಲ್ಲಿ ನಡೆದ ಸ್ಫೋಟ ಪ್ರಕರಣದಲ್ಲಿ ಸಾವನ್ನಪ್ಪಿರುವ ಸಲೀಂ ಕೃಷಿಕನಾಗಿದ್ದ. ಮೃತ ಸಲೀಂ ಉತ್ತರ ಪ್ರದೇಶದಲ್ಲಿ 5 ಎಕರೆ ಜಮೀನು ಹೊಂದಿದ್ದ ವಿಚಾರ ಬೆಳಕಿಗೆ ಬಂದಿದೆ.



ಆದರೂ ಏಕೆ ಅಷ್ಟು ದೂರದಿಂದ ಮೈಸೂರು ಅರಮನೆ ಬಳಿಗೆ ಬಲೂನ್ ಮಾರಲು ಬಂದಿದ್ದ ಎಂಬುದು ಅನುಮಾನಸ್ಪದವಾಗಿದೆ.

ಅಲ್ಲದೆ, ಉತ್ತರ ಪ್ರದೇಶದಿಂದ ಬಂದು ಲಾಡ್ಜ್ ಬಾಡಿಗೆ ಕಟ್ಟಿ, ಊಟ, ತಿಂಡಿ ಮಾಡಿ ಬಲೂನ್ ಮಾರಿ ಬದುಕಲು ಸಾಧ್ಯವೇ? ಅಷ್ಟೊಂದು ಆದಾಯ ಬರಲು ಸಾಧ್ಯವೇ ಎಂಬ ಅನುಮಾನ ದಟ್ಟವಾಗಿದೆ. ಅಲ್ಲದೆ, ಅಂದು ಏಕಾಏಕಿ ಅರಮನೆ ಮುಂದೆ ಬಲೂನ್ ಮಾರಲು ಬಂದಿದ್ದೇಕೆ. ಈತನ ಜೊತೆಗಿದ್ದವರು ಅಂದು ವ್ಯಾಪಾರಕ್ಕೆ ಏಕೆ ಹೋಗಿರಲಿಲ್ಲ ಎಂಬ ಪ್ರಶ್ನೆಗಳಿವೆ. ಈತ ಸಹೋದರ ಸಹ ಮೈಸೂರಿಗೆ ಬಂದಿದ್ದ. ಆದರೆ ಆತ ಇನ್ನೂ ಪೊಲೀಸರಿಗೆ ಸಿಕ್ಕಿಲ್ಲ ಎನ್ನಲಾಗಿದೆ. ಪುಟ 2ಕ್ಕೆ

### ಜೊತೆಗಾರರ ವಿಚಾರಣೆ

ಸಲೀಂ ಜೊತೆ ವಾಸವಿದ್ದ ಇಬ್ಬರನ್ನು ಪೊಲೀಸರು ವಿಚಾರಣೆಗೆ ಒಳಪಡಿಸಿದ್ದಾರೆ. ಸಲೀಂ ಜೊತೆ ಬಲೂನ್ ಮಾರಾಟಕ್ಕೆ ಉತ್ತರ ಪ್ರದೇಶದಿಂದ ಇಬ್ಬರು ಬಂದಿದ್ದರು. ಪ್ರತಿ ದಿನ ಸಲೀಂ ಜೊತೆ ಇಬ್ಬರು ಬಲೂನ್ ಮಾರಾಟ ಮಾಡುವುದಕ್ಕೆ ಹೋಗುತ್ತಿದ್ದರು. ಅಂದು ಸಲೀಂ ಒಬ್ಬನೇ ಮಾತ್ರ ಪುಟ 2ಕ್ಕೆ

### ಅರಮನೆಯೊಳಗೆ ಸಲೀಂ!

ಸಲೀಂ ಅರಮನೆಯ ಒಳಗಡೆ ಹೋಗಿರುವ ಫೋಟೋ ಈಗ ಲಭ್ಯವಾಗಿದೆ. ಅರಮನೆಯೊಳಗೆ ಸಲೀಂ ಹೋಗಿದ್ದು ಯಾವಾಗ? ಸಲೀಂ ಕೇವಲ ಬಲೂನ್ ಮಾರಾಟ ಮಾಡುತಿದ್ದನೇ ಅಥವಾ ಬೇರೆ ಯಾವ ಕೆಲಸ ಮಾಡುತ್ತಿದ್ದನೇ ಈ ಆಯಾಮದಲ್ಲೂ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

# ನರೇಗಾ ಬದಲು: ವಿನಾಶಕಾರಿ ಕ್ರಮ

## ಪ್ರಧಾನಿ ಮೋದಿ ವಿರುದ್ಧ ವಿಪಕ್ಷ ನಾಯಕ ರಾಹುಲ್ ಗಾಂಧಿ ವಾಗ್ದಾಳಿ

**ನವದೆಹಲಿ:** ನರೇಗಾ ಬದಲಿಗೆ ಜಿ ರಾಮ್ ಜಿ ಕಾಯ್ದೆ ಜಾರಿಗೆ ತಂದಿರುವ ಬಗ್ಗೆ ಕೇಂದ್ರದ ಎನ್‌ಡಿಎ ಸರ್ಕಾರದ ವಿರುದ್ಧ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದರು.

ನವದೆಹಲಿಯಲ್ಲಿ ಶನಿವಾರ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರು ನೋಟು ಅಮಾನ್ಯೀಕರಣದ ರೀತಿಯೇ ಏಕಾಂಗಿಯಾಗಿ ರಾಜ್ಯಗಳು ಮತ್ತು ಬಡವರ ಮೇಲೆ ವಿನಾಶಕಾರಿ ದಾಳಿ ಮಾಡಿದ್ದಾರೆ. ಯಾವುದೇ ಅಧ್ಯಯನ ನಡೆಸದೇ, ಸಂಪುಟದ ಅನುಮತಿ ಪಡೆಯದೆ ಪ್ರಧಾನಿ ನರೇಂದ್ರ ಮೋದಿ ಒಬ್ಬರೇ ನರೇಗಾ ಯೋಜನೆಯನ್ನು ನಾಶ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೇಂದ್ರ ಸರ್ಕಾರದ ಕ್ರಮವನ್ನು ಕಾಂಗ್ರೆಸ್ ಬಲವಾಗಿ ವಿರೋಧಿಸುತ್ತದೆ. ಈ ಸಂಬಂಧ ಕಾಂಗ್ರೆಸ್ ಜನವರಿ 5ರಿಂದ ರಾಷ್ಟ್ರವ್ಯಾಪಿ ನರೇಗಾ ಬಚಾವೋ ಅಭಿಯಾನ ಆರಂಭಿಸಲು ಮುಂದಾಗಿದೆ. ವಿಪಕ್ಷಗಳು ಸಹ ಇದಕ್ಕೆ ಕೈಜೋಡಿಸಲಿವೆ ಎಂದು ಹೇಳಿದರು.



ಯುಪಿಎ ಕಾಲದ ನರೇಗಾ ಕೇವಲ ಉದ್ಯೋಗದ ಕಾರ್ಯಕ್ರಮವಲ್ಲ. ಬದಲಾಗಿ ಪ್ರಪಂಚದಾದ್ಯಂತ ಮೆಚ್ಚುಗೆ ಪಡೆದ ಅಭಿವೃದ್ಧಿ ಚೌಕಟ್ಟು. ಅದನ್ನು ರದ್ದುಗೊಳಿಸುವುದು ಹಕ್ಕು ಆಧಾರಿತ ವಿಧಾನ ಮತ್ತು ದೇಶದ ಒಕ್ಕೂಟ ರಚನೆಯ ಮೇಲಿನ ದಾಳಿಯಾಗಿದೆ ಎಂದು ಆರೋಪಿಸಿದರು. 20 ವರ್ಷಗಳಷ್ಟು ಹಳೆಯ ನರೇಗಾ ಬದಲಿಗೆ ವಿಬಿ-ಜಿ ರಾಮ್ ಜಿ ಮಸೂದೆಯನ್ನು ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಜಾರಿ ಮಾಡಲಾಗಿತ್ತು.

### ಬಡವರ ಬೆನ್ನಿಗೆ ಇರಿದ ಮೋದಿ: ಖರ್ಗೆ

**ನವದೆಹಲಿ:** ಯುಪಿಎ ಸರ್ಕಾರದ ಅವಧಿಯಲ್ಲಿ ದೂರದೃಷ್ಟಿಯಿಂದ ಜಾರಿ ಮಾಡಿದ ಎಂಜಿ-ನರೇಗಾ ಯೋಜನೆಯನ್ನು ರದ್ದುಗೊಳಿಸುವ ಮೂಲಕ ನರೇಂದ್ರ ಮೋದಿ ಬಡವರ ಬೆನ್ನಿಗೆ ಇರಿದಿದ್ದಾರೆ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ತೀವ್ರ ವಾಗ್ದಾಳಿ ನಡೆಸಿದರು.



ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಶನಿವಾರ ಮಾತನಾಡಿದ ಅವರು, ಮಹಾತ್ಮ ಗಾಂಧಿಯವರ ಪುಟ 2ಕ್ಕೆ

# ಸಿಎಂ ಬದಲಾವಣೆ: ಸದ್ಯಕ್ಕೆ ಬ್ರೇಕ್

## ವಿದೇಶಕ್ಕೆ ತೆರಳಿದ ರಾಹುಲ್: ಸಿದ್ದು ಬೆಂಗಳೂರಿಗೆ ವಾಪಸ್

**ನವದೆಹಲಿ:** ಮುಖ್ಯಮಂತ್ರಿ ಬದಲಾವಣೆ ಮತ್ತು ಸಚಿವ ಸಂಪುಟ ಪುನಾರಚನೆ ವಿಚಾರಕ್ಕೆ ಸದ್ಯಕ್ಕೆ ತಾತ್ಕಾಲಿಕ ಬ್ರೇಕ್ ಬಿದ್ದಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿದೇಶದಿಂದ ವಾಪಸ್ ಆದ ಬಳಿಕ ಈ ಬಗ್ಗೆ ಚರ್ಚೆ ನಡೆಯುವ ಸಾಧ್ಯತೆಗಳಿವೆ. ಜನವರಿ 9ರವರೆಗೂ ಯಾವುದೇ ಬೆಳವಣಿಗೆ ನಡೆಯುವ ಲಕ್ಷಣಗಳು ಸದ್ಯಕ್ಕೆ ಕಂಡು ಬರುತ್ತಿಲ್ಲ

ಕಾಂಗ್ರೆಸ್ ಕಾರ್ಯಕಾರಣಿ ಸಭೆ ಹಿನ್ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ ದೆಹಲಿಗೆ ತೆರಳಿದ್ದರು. ಸಭೆ ಬಳಿಕ ಹೈಕಮಾಂಡ್ ನಾಯಕರ ಜೊತೆಗೆ ಪ್ರತ್ಯೇಕ ಸಭೆ ನಡೆಯುವ ನಿರೀಕ್ಷೆ ಮಾಡಲಾಗಿತ್ತು. ಆದರೆ, ಹೈಕಮಾಂಡ್ ನಾಯಕರು ಲಭ್ಯವಾಗದ ಹಿನ್ನೆಲೆ ರಾಜ್ಯದ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸದೆ ಸಿಎಂ ಸಿದ್ದರಾಮಯ್ಯ ಬೆಂಗಳೂರಿಗೆ ವಾಪಸ್ ಆಗಿದ್ದಾರೆ.

ರಾಹುಲ್ ಗಾಂಧಿ ನಾಳೆಯಿಂದ ಜನವರಿ 8ರ ವರೆಗೂ ವಿದೇಶ ಪ್ರವಾಸಕ್ಕೆ ತೆರಳುತ್ತಿದ್ದಾರೆ. ಹೀಗಾಗಿ, ಸಿಎಂ ಬದಲಾವಣೆ ಅಥವಾ ಸಂಪುಟ ಪುನಾರಚನೆ ವಿಚಾರಕ್ಕೆ ತಾತ್ಕಾಲಿಕ ಬ್ರೇಕ್ ಬಿದ್ದಿದೆ. ರಾಹುಲ್ ಗಾಂಧಿ ವಿದೇಶದಿಂದ ಮರಳಿದ ಬಳಿಕ ಅಂದರೆ ಜನವರಿ 9ರ ಬಳಿಕವಷ್ಟೆ ಈ ಬಗ್ಗೆ ಚರ್ಚೆ ಸಾಧ್ಯತೆ ಇದೆ.



ಸಚಿವ ಸಂಪುಟ ಪುನಾರಚನೆ ಲೆಕ್ಕಚಾರದಲ್ಲಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಹುಲ್ ಗಾಂಧಿ ಅವರು ವಾಪಸ್ ಆದ ಬಳಿಕ ದೆಹಲಿಗೆ ತೆರಳಿ ಎಲ್ಲ ನಾಯಕರನ್ನು ಭೇಟಿಯಾಗಿ ಬಜೆಟ್‌ಗೂ ಮುನ್ನ ಸಂಪುಟ ಪುನಾರಚನೆ ಮಾಡುವ ಇಂಗಿತವನ್ನು ಆಪ್ತರ ಮುಂದೆ ವ್ಯಕ್ತಪಡಿಸಿದ್ದಾರೆ.

### ಬೆಳಗ್ಗೆಯೇ ಸಿಗಲಿದೆ ಮದ್ಯ!



**ಬೆಂಗಳೂರು:** ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ಡಿ.31ರಂದು ಬೆಳಿಗ್ಗೆಯಿಂದಲೇ ಮದ್ಯ ಸಿಗಲಿದೆ. ಆದರೆ, ರಾತ್ರಿ ಸರಿಯಾಗಿ 1 ಗಂಟೆಗೆ ಎಲ್ಲವೂ ಬಂದ್ ಆಗಬೇಕು ಎಂದು ಪೊಲೀಸರು ಆದೇಶ ಮಾಡಿದ್ದಾರೆ. ನಗರದ ವ್ಯಾಪ್ತಿಯಲ್ಲಿ ಸಿಎಲ್- 5ಗೂ ಸಹ ಬೆಳಿಗ್ಗೆ 6ರಿಂದ ಮಧ್ಯರಾತ್ರಿ 1ರ ವರೆಗೆ ಮದ್ಯದ ಮಾರಾಟಕ್ಕೆ ಅವಕಾಶ ಇದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಆದೇಶ ಹೊರಡಿಸಿದ್ದಾರೆ.

### ವಲಸಿಗರಾದರೂ ಜಾಗ: ಸಿದ್ದರಾಮಯ್ಯ ಭರವಸೆ

**ನವದೆಹಲಿ:** ಬೆಂಗಳೂರು ಕೋಗಿಲು ಬಡಾವಣೆಯ ಮನೆ ಕಳೆದುಕೊಂಡವರಿಗೆ ಪರ್ಯಾಯ ವ್ಯವಸ್ಥೆ ಮಾಡಲಾಗುವುದು. ಅವರೆಲ್ಲಾ ವಲಸಿಗರಾದರೂ ಮಾನವೀಯತೆ ದೃಷ್ಟಿಯಿಂದ ಬೇರೆ ಕಡೆ ಮನೆ ಕಟ್ಟಿಕೊಳ್ಳಲು ಜಾಗ ಕೊಡುತ್ತೇವೆ ಎಂದು ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.



ಬೆಂಗಳೂರಿನ ಕೋಗಿಲು ಲೇಔಟ್ ಬಳಿ ನಡೆದ ಮನೆಗಳ ತೆರವು ಕಾರ್ಯಾಚರಣೆ ಕುರಿತಂತೆ ಕೇರಳ ಸಿಎಂ ಪಿಣರಾಯಿ ವಿಜಯನ್ ಹೇಳಿಕೆ ಬಗ್ಗೆ ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ. ಕೋಗಿಲು ಲೇಔಟ್‌ನಲ್ಲಿ 2021-22ರಿಂದ ಅನಧಿಕೃತವಾಗಿ ಮನೆಗಳನ್ನು ಕಟ್ಟಿಕೊಂಡು ವಾಸಿಸುತ್ತಿದ್ದರು. ಅವರಿಗೆ ನೋಟಿಸ್ ಕೊಟ್ಟು ತೆರವು ಮಾಡಬೇಕು ಎಂದು ಹೇಳಿದ್ದೇವು. ಆದರೆ ಅಲ್ಲಿ ವಾಸಿಸುತ್ತಿದ್ದವರು ಪುಟ 2ಕ್ಕೆ

### ಸಿದ್ದು ಕೊಟ್ಟರೆ ಡಿಕೆಶಿಗೆ ಗದ್ದುಗೆ!

**ಬೆಳಗಾವಿ:** ಸಿದ್ದರಾಮಯ್ಯ ಅವರು ತಾವಾಗಿಯೇ ಮುಖ್ಯಮಂತ್ರಿ ಅಧಿಕಾರ ಬಿಟ್ಟು ಕೊಟ್ಟರೆ ಮಾತ್ರ ಡಿ.ಕೆ.ಶಿವಕುಮಾರ್ ಅವರಿಗೆ ಅವಕಾಶ ಸಿಗಬಹುದು. ಇಲ್ಲದಿದ್ದರೆ ಇಲ್ಲ ಎಂದು ಕೋಡಿಮಠ ಸಂಸ್ಥಾನದ ಡಾ.ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಸ್ಫೋಟಕ ಭವಿಷ್ಯ ನುಡಿದಿದ್ದಾರೆ.

▸▸ ಇಲ್ಲದಿದ್ದರೆ ಕಷ್ಟ, ಕಷ್ಟ
▸▸ ಕೋಡಿಶ್ರೀ ಭವಿಷ್ಯ

ರಾಜ್ಯದಲ್ಲಿ ಸಿಎಂ ಕುರ್ಚಿ ಕಾದಾಟ ಹಾಗೂ ಸಿದ್ದರಾಮಯ್ಯ- ಡಿಕೆ ಶಿವಕುಮಾರ್ ಬೆಂಬಲಿಗರ ನಡುವಿನ ಬಣ ಬಡಿದಾಟದ ನಡುವೆಯೇ ರಾಜ್ಯ ರಾಜಕೀಯದ ಬಗ್ಗೆ ಪ್ರತಿಕ್ರಿಯಿಸಿದ ಕೋಡಿಶ್ರೀಗಳು, ಹಾಲುಮತ ಸಮಾಜದವರಿಂದ



ಅಧಿಕಾರ ಕಿತ್ತುಕೊಳ್ಳೊದು ಅಷ್ಟು ಸುಲಭವಲ್ಲ. ಅದು ಕಷ್ಟ ಕಷ್ಟ ಎಂದು ಹೇಳಿದರು.

ಅರಸನ ಅರಮನೆಗೆ ಕಾರ್ಮೋಡ ಕವಿದಿದೆ. ಅರಸನ ಬಂಡಾರವೇ ಬಜೆಟ್ ಎಂದಿದ್ದಾರೆ. ವರ್ಷದ ಬಜೆಟ್ ಮುಗಿದ ಬಳಿಕ ಅವರಾಗಿ ಸ್ಥಾನ ಬಿಟ್ಟು ಕೊಟ್ಟರೆ ಮಾತ್ರ ಬೇರೆಯವರಿಗೆ ಅವಕಾಶವಿದೆ. ಇಲ್ಲವಾದ್ರೆ ಪುಟ 2ಕ್ಕೆ

### ಹುಲಿ ದಾಳಿಗೆ ವಾಚರ್ ಬಲಿ

▸▸ ಬಂಡೀಪುರ ಅರಣ್ಯದಲ್ಲಿ ಗಸ್ತು ತಿರುಗುವಾಗ ದುರ್ಘಟನೆ

**ಚಾಮರಾಜನಗರ:** ಗುಂಡ್ಲುಪೇಟೆ ತಾಲ್ಲೂಕಿನ ಬಂಡೀಪುರದಲ್ಲಿ ಹುಲಿ ದಾಳಿಯಿಂದ ಅರಣ್ಯ ಇಲಾಖೆಯ ವಾಚರ್ ಸಾವನ್ನಪ್ಪಿದ ಘಟನೆ ನಡೆದಿದೆ. ಹುಲಿ ದಾಳಿಗೆ ಬಲಿಯಾದ ವಾಚರ್‌ನ್ನು ಸಣ್ಣಹೈದ ಎಂದು ಗುರುತಿಸಲಾಗಿದೆ.



ಬಂಡೀಪುರದ ಮರಳಳ್ಳ ಕ್ಯಾಂಪ್ ಸಮೀಪ ಅವರು ಗಸ್ತಿಗೆ ಹೋಗಿದ್ದರು. ಈ ವೇಳೆ ಹುಲಿ ದಾಳಿ ನಡೆಸಿ ಅವರನ್ನು ಕೊಂದು ಹಾಕಿದೆ. ಸಣ್ಣಹೈದ ಅವರು ಕಳೆದ 8 ವರ್ಷಗಳಿಂದ ಅರಣ್ಯ ಇಲಾಖೆಯಲ್ಲಿ ವಾಚರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

ಹುಲಿ ದಾಳಿ ಮಾಡಿದ್ದರಿಂದ ಜೊತೆಯಲ್ಲಿದ್ದವರು ಓಡಿ ಹೋಗಿದ್ದಾರೆ. ಮುಖಕ್ಕೆ ಪರಚಿದ ಗಾಯವಾಗಿದೆ, ಯಾವುದೇ ಭಾಗವನ್ನು ತಿಂದಿಲ್ಲ. ಮೃತದೇಹವನ್ನು ಗುಂಡ್ಲುಪೇಟೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆಗೆ ಕೊಂಡೊಯ್ಯಲಾಗಿದೆ. ಹುಲಿ ದಾಳಿ ನಡೆಸಿದ ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

# ಪಿಣರಾಯಿ ಚುನಾವಣೆ ರಾಜಕೀಯ ಗಿಮಿಕ್

## ಸರ್ಕಾರಿ ಜಾಗದಲ್ಲಿ ಸ್ಲಂ ನಿರ್ಮಾಣಕ್ಕೆ ಬಿಡಲ್ಲ: ಡಿ.ಕೆ.ಶಿವಕುಮಾರ್ ಕಿಡಿ

**ಬೆಂಗಳೂರು:** ಚುನಾವಣೆ ಸಂದರ್ಭದಲ್ಲಿ ಪಿಣರಾಯಿ ವಿಜಯನ್ ರಾಜಕೀಯ ಗಿಮಿಕ್ ಮಾಡುವುದು ಬೇಡ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಕಿಡಿಕಾರಿದರು.

ಕರ್ನಾಟಕದಲ್ಲಿಯೂ ಉತ್ತರ ಪ್ರದೇಶದಂತೆ ಬುಲ್ಡೋಜರ್ ಬಳಸಿ ಮುಸ್ಲಿಮರ ಮನೆ ಧ್ವಂಸ ಮಾಡಲಾಗುತ್ತಿದೆ ಎಂದು ಕೇರಳ ಸಿಎಂ ಅಸಮಾಧಾನ ಹೊರಹಾಕಿದ್ದರು. ಈ ಹೇಳಿಕೆಗೆ ಡಿಸಿಎಂ ಡಿಕೆಶಿ ಖಡಕ್ ಪ್ರತಿಕ್ರಿಯೆ ಕೊಟ್ಟಿದ್ದಾರೆ. ಪಿಣರಾಯಿ ವಾಸ್ತವ ಅರ್ಥ ಮಾಡಿಕೊಳ್ಳದೇ ಮಾತನಾಡಿದ್ದಾರೆ. ಕೆಲವರು ಡಂಪ್ ಸೈಟ್‌ನಲ್ಲಿ ಅಕ್ರಮವಾಗಿ ವಾಸವಾಗಿದ್ದರು. ನಮ್ಮ ಶಾಸಕರು, ಅಧಿಕಾರಿಗಳು ಅದನ್ನ ತೆರವು ಮಾಡಿದ್ದಾರೆ ಎಂದು ಡಿಕೆಶಿ ಸ್ಪಷ್ಟಪಡಿಸಿದ್ದಾರೆ.



ನಮಗೆ ಬೆಂಗಳೂರು ಬಗ್ಗೆ ಚೆನ್ನಾಗಿ ಗೊತ್ತಿದೆ. ಯಾರು ಮನೆ ಕಳೆದುಕೊಂಡಿದ್ದಾರೋ, ಅವರಿಗೆ ರಾಜೀವ್ ಗಾಂಧಿ ವಸತಿ ನಿಗಮದ ಮೂಲಕ ಮನೆ ಹಂಚಿಕೆ ಪುಟ 2ಕ್ಕೆ

### ಬುಲ್ಡೋಜರ್ ಸಂಸ್ಕೃತಿ ನಮ್ಮಲ್ಲಿಲ್ಲ

**ಬೆಂಗಳೂರು:** ಕೋಗಿಲು ಬಡಾವಣೆಯಲ್ಲಿ ಅಕ್ರಮ ಒತ್ತುವರಿ ಪ್ರದೇಶ ನೆಲಸಮಗೊಳಿಸಿರುವ ಪ್ರಕರಣದಲ್ಲಿ ಸತ್ಯಾಸತ್ಯತೆ ಅರಿಯದೇ ಕೇರಳ ಸಿಎಂ ಪಿಣರಾಯಿ ವಿಜಯನ್ ಹಸ್ತಕ್ಷೇಪ ಮಾಡಬಾರದು ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಆಕ್ಷೇಪ ವ್ಯಕ್ತಪಡಿಸಿದರು.

ಸದಾಶಿವನಗರ ನಿವಾಸದ ಬಳಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಶನಿವಾರ ಪ್ರತಿಕ್ರಿಯೆ ನೀಡಿದರು. ಬುಲ್ಡೋಜರ್ ಸಂಸ್ಕೃತಿ ನಮ್ಮಲ್ಲಿ ಇಲ್ಲ. ನಗರದ ಹೃದಯ ಭಾಗದಲ್ಲಿರುವ ಸರ್ಕಾರಿ ಜಮೀನನ್ನು ರಕ್ಷಣೆ ಮಾಡಿಕೊಳ್ಳಲಾಗಿದೆ. ತ್ಯಾಜ್ಯ ವಿಲೇವಾರಿ ಘಟಕಕ್ಕೆ ನಿಗದಿಯಾಗಿರುವ ಜಾಗವನ್ನು ಒತ್ತುವರಿ ಮಾಡಿಕೊಳ್ಳಲು ಬಿಡುವುದಿಲ್ಲ. ಈ ಬಗ್ಗೆ ನಮ್ಮ ಪಕ್ಷ ಹಾಗೂ ಕೇರಳದ ನಾಯಕರಿಗೆ ವರದಿ ರವಾನೆ ಮಾಡುತ್ತೇನೆ ಎಂದರು. ಇದು ಅಲ್ಪಸಂಖ್ಯಾತರ ವಿಚಾರವಲ್ಲ. ಯಾರಿಗಾದರೂ ಪುಟ 2ಕ್ಕೆ

# ಬಿಜೆಪಿಗೆ ಸ್ವಂತ ಬಲ: ಕಾರ್ಯಕರ್ತರ ಅಪೇಕ್ಷೆ

## ಮೈತ್ರಿ ಬಗ್ಗೆ ಹೈಕಮಾಂಡ್ ನಿರ್ಧರಿಸಲಿದೆ: ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ

**ಬೆಂಗಳೂರು:** ಬಿಜೆಪಿ ಸ್ವಂತ ಬಲದಲ್ಲಿ ಅಧಿಕಾರಕ್ಕೆ ಬರಬೇಕು ಅನ್ನುವ ನನ್ನ ಹೇಳಿಕೆ ಕಾರ್ಯಕರ್ತರ ಅಪೇಕ್ಷೆಯಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸ್ಪಷ್ಟಪಡಿಸಿದ್ದಾರೆ.

ಜೆಡಿಎಸ್ ಜೊತೆಗಿನ ಮೈತ್ರಿಯಲ್ಲಿ ತಮ್ಮ ಹೇಳಿಕೆಯಿಂದ ಗೊಂದಲ ಉಂಟಾಗಿರುವ ಬಗ್ಗೆ ಬೆಂಗಳೂರಿನಲ್ಲಿ ಮಾತಾಡಿದ ವಿಜಯೇಂದ್ರ ಅವರು, ಪ್ರತಿ ಚುನಾವಣೆಯಲ್ಲೂ ನಾವು ಸ್ಪಷ್ಟ ಬಹುಮತಕ್ಕೆ 5-10 ಸೀಟ್‌ಗಳಿಂದ ವಂಚಿತರಾಗಿದ್ದೀವಿ. ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಬೇಕು ಅನ್ನುವುದು ಕಾರ್ಯಕರ್ತರ ಅಪೇಕ್ಷೆ. ಮೊನ್ನೆ ನಡೆದ ಸ್ಥಳೀಯ ಚುನಾವಣೆಯಲ್ಲಿ ಬಿಜೆಪಿ ಬಹುಮತ ಪಡೆದಿದೆ. ಕಾರ್ಯಕರ್ತರ ಆಕಾಂಕ್ಷೆಯಂತೆ ಅಧ್ಯಕ್ಷನಾಗಿ ನಾನು ಮಾತನಾಡುವುದು ಕರ್ತವ್ಯ. ಅಂತಿಮವಾಗಿ ಕಾರ್ಯಕರ್ತರಿಗೆ ಏನು ಸಂದೇಶ ಕೊಡಬೇಕೋ ಕೊಟ್ಟಿದ್ದೇನೆ ಎಂದು ತಿಳಿಸಿದರು.

ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿ ಜೊತೆ ಮೈತ್ರಿ ಇಲ್ಲ ಎಂಬ ಎಚ್.ಡಿ. ದೇವೇಗೌಡರ ಹೇಳಿಕೆ ಕುರಿತು ಮಾತಾಡಿದ ವಿಜಯೇಂದ್ರ, ಮಾಜಿ ಪ್ರಧಾನಿ ದೇವೇಗೌಡ ಅವರ ಬಗ್ಗೆ ನಮಗೆ ಗೌರವ ಇದೆ. ಅವರು ಮುತ್ಸದ್ದಿಗಳು. ದೇವೇಗೌಡರು ಮತ್ತು ಯಡಿಯೂರಪ್ಪ ಮಾತ್ರ ಹೋರಾಟದ ಹಿನ್ನೆಲೆಯಲ್ಲಿ ಬಂದವರು. ಮೋದಿಯವರ ಕೈಬಲಪಡಿಸಲು ಅವರು ಎನ್‌ಡಿಎ ಮಿತ್ರ ಪಕ್ಷ ಆಗಿದ್ದಾರೆ. ವರಿಷ್ಠರು ಹೇಳೋದನ್ನು ನಾವು ಕೇಳ್ತೇವೆ. ಇದರಲ್ಲಿ ಯಾವುದೇ ಗೊಂದಲ ಇಲ್ಲ. ದೇವೇಗೌಡರು ಹೇಳಿರೋದನ್ನು ತಪ್ಪಾಗಿ ಅರ್ಥೈಸುವ ಅಗತ್ಯ ಇಲ್ಲ. ಮೈತ್ರಿ ಬಗ್ಗೆ ಹೈಕಮಾಂಡ್ ತೀರ್ಮಾನ ಮಾಡಲಿದೆ. ಸ್ಥಳೀಯ ಚುನಾವಣೆಯಲ್ಲೂ ಮೈತ್ರಿ ಮಾಡಿಕೊಳ್ಳಬೇಕು ಎಂದು ಹೈಕಮಾಂಡ್ ಹೇಳಿದರೆ ಅದಕ್ಕೆ ನಾವೆಲ್ಲ ಬದ್ಧವಾಗಿರ್ತೇವೆ ಎಂದು ಹೇಳಿದರು.



### ಜಮೀರ್ ಮುಸ್ಲಿಂ ಲೇಔಟ್ ಮಾಡ್ತಾರೆ!

ಯಲಹಂಕದ ಕೋಗಿಲು ಲೇಔಟ್ ನಲ್ಲಿ ಅಕ್ರಮ ಮನೆಗಳ ತೆರವಿಗೆ ಕೇರಳ ಸಿಎಂ ಪಿಣರಾಯಿ ವಿಜಯನ್ ಆಕ್ಷೇಪ ಬಗ್ಗೆ ಮಾತಾಡಿರುವ ಬಗ್ಗೆ ವಿಜಯೇಂದ್ರ ಮಾತನಾಡಿ, ಅಕ್ರಮ ಲೇಔಟ್ ತೆರವು ಬಗ್ಗೆ ಹೆಚ್ಚು ಚರ್ಚೆ ಬೇಡ. ಅದೇನಾದರೂ ತಿಳಿದರೆ ಸಿಎಂ ಮತ್ತು ಜಮೀರ್ ಅವರೇ ಸೇರಿ ಭೂಮಿ ಖರೀದಿ ಮಾಡಿ ಮುಸ್ಲಿಂ ಲೇಔಟ್ ಮಾಡಿಬಿಡ್ತಾರೆ ಎಂದು ಲೇವಡಿ ಮಾಡಿದರು.

# ವಿದ್ಯೆ ಯಾರೊಬ್ಬರ ಸ್ವತ್ತು ಅಲ್ಲ– ಶಾಸಕ ಟಿ.ಎಸ್.ಶ್ರೀವತ್ಸ




ಮೈಸೂರು: ವಿದ್ಯೆ ಯಾರೊಬ್ಬರ ಸ್ವತ್ತೂ ಅಲ್ಲ ಎಂದು ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ಹೇಳಿದರು.

ನಗರದ ಊಟಿ ರಸ್ತೆಯ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನಲ್ಲಿ ಶನಿವಾರ ಏರ್ಪಡಿಸಿದ್ದ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಿದ್ಯೆ ಸಾಧಕರ ಸ್ವತ್ತು. ವಿದ್ಯೆ ಒಂದಿದ್ದರೆ ಏನು ಬೇಕಾದರೂ ಮಾಡಬಹುದು ಎನ್ನುವುದಕ್ಕೆ ಮೈಸೂರಿನಲ್ಲಿಯೇ ಹಲವಾರು ನಿದರ್ಶನಗಳಿವೆ. 11 ವರ್ಷದ ಬಾಲಕನೊಬ್ಬ ಸತತ 14 ಗಂಟೆಗಿಂತ ಹೆಚ್ಚು ವಿವೇಕಾನಂದರನ್ನು ಕುರಿತು ಮಾತನಾಡಿ, ವಿಶ್ವ ದಾಖಲೆ ಮಾಡಿದ್ದಾನೆ. ಅದೇ ರೀತಿ ನೀವು ಕೂಡ ವಿದ್ಯೆಯನ್ನು ಚೆನ್ನಾಗಿ ಕಲಿಯಬೇಕು. ವಿದ್ಯೆ ಜೊತೆಗೆ ಸಂಸ್ಕಾರವು ಮುಖ್ಯ. ವಿದ್ಯಾರ್ಥಿಗಳು ದೇಶ, ನಾಡು, ಗುರುಹಿರಿಯರನ್ನು ಪ್ರೀತಿಸಬೇಕು. ದೇಶದ ಸತ್ಪ್ರಜೆಗಳಾಗಿ ಬೆಳೆಯಬೇಕು ಎಂದು ಅವರು ಕರೆ ನೀಡಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಸಮಾರೋಪ ಭಾಷಣ ಮಾಡಿದರು. ಮುಖ್ಯ ಅತಿಥಿಯಾಗಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಬಿ.ನಿರಂಜನಮೂರ್ತಿ ಮಾತನಾಡಿದರು. ಕಾಲೇಜಿನ ಪ್ರಾಂಶುಪಾಲ ಎಸ್.ನಂಜುಂಡಸ್ವಾಮಿ, ಸರಸ್ವತಿಪುರಂ ಜೆಎಸ್‌ಎಸ್ ಪಿಯು ಕಾಲೇಜಿನ ಪ್ರಾಂಶುಪಾಲ ಗುರುಪಾದಸ್ವಾಮಿರನ್ನು ಸನ್ಮಾನಿಸಲಾಯಿತು.ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಪ್ರಾಂಶುಪಾಲ ಎಸ್.ನಂಜುಂಡಸ್ವಾಮಿ ಸ್ವಾಗತಿಸಿದರು. ಸಾಂಸ್ಕೃತಿಕ ವೇದಿಕೆಯ ಸಂಚಾಲಕ ಜಿ. ರಮೇಶ್, ಕ್ರೀಡಾ ಸಂಚಾಲಕ ಟಿ. ಅರವಿಂದ ಇದ್ದರು. ಉಪನ್ಯಾಸಕ ಶಿವಕುಮಾರ್ ಸಾಂಸ್ಕೃತಿಕ ಚಟುವಟಿಕೆಗಳ ವರದಿ, ಉಪನ್ಯಾಸಕಿ ಪಿ. ಮಂಜುಳಾ ಕ್ರೀಡಾ ಚಟುವಟಿಕೆಗಳ ವರದಿ ಓದಿದರು. ಅದಿತಿ ಪ್ರಾರ್ಥಿಸಿದರು. ಉಪನ್ಯಾಸಕ ಎಚ್.ಆರ್. ಗಾಯತ್ರಿ ವಂದಿಸಿದರು. ಉಪನ್ಯಾಸಕ ಪಿ.ಎಸ್. ಮಂಜುನಾಥ್ ಕಾರ್ಯಕ್ರಮ ನಿರೂಪಿಸಿದರು.

# ಹೋರಾಟಗಾರರ ವಿರುದ್ಧ ಷಡ್ಯಂತ್ರಕ್ಕೆ ಖಂಡನೆ



ಮೈಸೂರು ಎಚ್.ಡಿ. ಕೋಟೆ ಹಾಗೂ ಹೊಂದಿಕೊಂಡ ಅರಣ್ಯದಲ್ಲಿ ಟೈಗರ್ ಸಫಾರಿ ಮತ್ತು ಅಕ್ರಮ ರೆಸಾರ್ಟ್‌ಗಳ ವಿರುದ್ಧ ಧ್ವನಿಯೆತ್ತಿದ ಸೇವೆ ಕಬಿನಿ ತಂಡದ ಸದಸ್ಯರು, ಪರಿಸರ ಪ್ರೇಮಿಗಳು ಮತ್ತು ಹೋರಾಟಗಾರರನ್ನು ಪ್ರಭಾವಿ ರಾಜಕಾರಣಿಗಳು ಹಾಗೂ ರೆಸಾರ್ಟ್ ಮಾಲೀಕರು ಗುರಿಯಾಗಿರಿಸಿಕೊಂಡು ಸಮಸ್ಯೆ ಸೃಷ್ಟಿಸುತ್ತಿದ್ದಾರೆ ಎಂದು ತಂಡದ ಸದಸ್ಯ ಮಧುಕೇಶ್ ಆರೋಪಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇದಕ್ಕೆ ಉದಾಹರಣೆಯಾಗಿ ಅಕ್ರಮ ರೆಸಾರ್ಟ್ ವಿರುದ್ಧ ಹಾಗೂ ಟೈಗರ್ ಸಫಾರಿ ಖಂಡಿಸಿ ಮಾತನಾಡಿದ ವಕೀಲ ವಿ. ರವಿಕುಮಾರ್ ಅವರ ವಿರುದ್ಧ ಅಪಪ್ರಚಾರ ಮಾಡಿ, ರಾಜ್ಯ ಬಾರ್ ಕೌನ್ಸಿಲ್ ಸದಸ್ಯತ್ವದಿಂದ ಹೊರ ಹಾಕಲಾಗಿದೆ. ಇದಕ್ಕೂ ಮೊದಲು ಅಕ್ರಮ ರೆಸಾರ್ಟ್ ಕುರಿತಂತೆ ರಾಜಕಾರಣಿಗಳು ಹಾಗೂ ಅಂತಹವುಗಳ ವಿರುದ್ಧ ಇವರು ಆಡಿದ ಮಾತು, ವಿಡಿಯೋಗಳನ್ನು ಸಾಮಾಜಿಕ ಮಾಧ್ಯಮಗಳಿಂದ ಡಿಲಿಟ್ ಮಾಡುವಂತೆ ಒತ್ತಡ ಹೇರಲಾಗಿತ್ತು. ಆದರೆ ಇದಕ್ಕೆ ಒಪ್ಪದಿದ್ದಾಗ ಈ ರೀತಿ ಮಾಡಲಾಗಿದೆ ಎಂದು ಆರೋಪಿಸಿದರು.

ಅಲ್ಲದೆ, ಸೇವ್ ಕಬಿನಿ ತಂಡದ ಸದಸ್ಯರ ವಿರುದ್ಧ ಅಪಪ್ರಚಾರ ಸರಿಯಲ್ಲ. ತಂಡದ ವಕೀಲರ ವಿರುದ್ಧ ಅಪಪ್ರಚಾರ ಹೀಗೇ ಮುಂದುವರಿದಲ್ಲಿ ದೊಡ್ಡ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ತಂಡದ ಸದಸ್ಯರು ಹಾಗೂ ವಿವಿಧ ಸಂಘಟನೆಗಳ ಹೋರಾಟಗಾರರಾದ ರಮೇಶ್, ಎಂ.ಬಿ. ಕುಮಾರಸ್ವಾಮಿ, ಡಿ.ಪಿ.ಕೆ. ಪರಮೇಶ್, ಅರವಿಂದ ಶರ್ಮಾ, ಶ್ರೀವಾರಿ ನಾಗರಾಜು, ಕಬಿನಿ ಶಿವಲಿಂಗ, ನಾಗರಾಜ್ ಇನ್ನಿತರರು ಇದ್ದರು.

# ಸ್ಫೋಟ: ಎನ್‌ಐಎ ತನಿಖೆ ನಡೆಸಲಿ

## ಬಿಜೆಪಿ ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಆರ್.ರಘು ಕೌಟಿಲ್ಯ ಒತ್ತಾಯ



ಮೈಸೂರು: 'ನಗರದಲ್ಲಿ ನಡೆದ ಸ್ಫೋಟ ಪ್ರಕರಣವನ್ನು ಹಗುರವಾಗಿ ಪರಿಗಣಿಸದೇ, ಎನ್‌ಐಎ (ರಾಷ್ಟ್ರೀಯ ತನಿಖಾ ದಳ) ತನಿಖೆ ನಡೆಸಬೇಕು' ಎಂದು ಬಿಜೆಪಿ ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಆರ್.ರಘು ಕೌಟಿಲ್ಯ ಒತ್ತಾಯಿಸಿದರು.

ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ನಗರದಲ್ಲಿ ಆತಂಕದ ಛಾಯೆ ಆವರಿಸಿದೆ. ಅಂಬಾವಿಲಾಸ ಅರಮನೆಯ ಉತ್ತರ ದಿಕ್ಕಿನಲ್ಲಿ ಮೇಲಿಂದ ಮೇಲೆ ಅಪರಾಧ ಪ್ರಕರಣಗಳು ಮರುಕಳಿಸುತ್ತಲೇ ಇವೆ. ಕೊಲೆ, ಬಾಲಕಿ ಮೇಲೆ ಅತ್ಯಾಚಾರ ಎಸಗಿ ಕೊಲೆ ಪ್ರಕರಣ ನಡೆದಿತ್ತು. ಈಗ, ಬಲೂನ್‌ಗೆ ಹೀಲಿಯಂ ಅನಿಲ ತುಂಬುವ ಸಿಲಿಂಡರ್ ಸ್ಫೋಟದಿಂದ ಮೂರು ಜೀವಗಳು ಬಲಿಯಾಗಿವೆ. ಕೆಲವರು ಗಾಯಗೊಂಡಿದ್ದಾರೆ. ಇಲ್ಲಿನ ಬೆಳವಣಿಗೆಗಳು ಜನರನ್ನು ಆತಂಕಕ್ಕೆ ದೂಡಿವೆ' ಎಂದು ಹೇಳಿದರು.

'ಮೈಸೂರಿನ ವಿಷಯದಲ್ಲಿ ಜಿಲ್ಲಾಡಳಿತ ಹಾಗೂ ಸರ್ಕಾರ ಅತ್ಯಂತ ಹಗುರವಾಗಿ ನಡೆದುಕೊಳ್ಳುತ್ತಿದೆ. ಸ್ಫೋಟ ಪ್ರಕರಣದ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು ತೇಪೆ ಹಚ್ಚುವ ಹೇಳಿಕೆ ನೀಡಿದ್ದಾರೆ. ಆಕಸ್ಮಿಕವಾಗಿ ನಡೆದಿದೆ, ದುರಾದೃಷ್ಟ ಎಂಬ ಮಾತುಗಳ ಮೂಲಕ ಘಟನೆಯ ಗಾಂಭೀರ್ಯತೆಯನ್ನು ಕಳೆದಿದ್ದಾರೆ' ಎಂದು ಆರೋಪಿಸಿದರು.

'ಸ್ಫೋಟದ ಘಟನೆಯನ್ನು ಅತ್ಯಂತ ಸೂಕ್ಷ್ಮವಾಗಿ ಅವಲೋಕಿಸಬೇಕಿತ್ತು. ಬಲೂನು ಮಾರುತ್ತಿದ್ದವ ಎಲ್ಲಿಂದ ಬಂದ, ಲಾಡ್ಜ್‌ನಲ್ಲಿ ಉಳಿಯುತ್ತಾರೆಂದರೆ ಅವರ ಹಿನ್ನೆಲೆ ಏನು? ಯಾವ್ಯಾವ ರಾಜ್ಯದವರು ಅರಮನೆ ಸುತ್ತ ವ್ಯಾಪಾರ ಮಡುತ್ತಿದ್ದಾರೆ? ಇವರ ಮಾಹಿತಿ ಸರ್ಕಾರ, ಪೊಲೀಸ್ ಇಲಾಖೆ ಅಥವಾ ಗುಪ್ತಚರ ಇಲಾಖೆಗೆ ಇದೆಯೇ? ಅನುಮತಿ ಕೊಟ್ಟವರಾರು?' ಎಂದು ಕೇಳಿದರು.

ನಗರದಲ್ಲಿ ಬೀದಿಬದಿ ವ್ಯಾಪಾರಿಗಳ ಸಂಖ್ಯೆ ಹೆಚ್ಚಾಗಿದ್ದು, ಬಹುತೇಕ ಹೊರರಾಜ್ಯದವರೇ ಆಕ್ರಮಿಸಿಕೊಂಡಿದ್ದಾರೆ. ಸ್ಫೋಟ ಪ್ರಕರಣವನ್ನು ಅರಮನೆಗೆ ಒದಗಿಬಂದಿರುವ ಗಂಡಾಂತರದ ಮುನ್ಸೂಚನೆ ಎಂದು ಸರ್ಕಾರ ಪರಿಗಣಿಸದಿದ್ದರೆ ಮುಂದಾಗುವ ದೊಡ್ಡ ಅನಾಹುತಗಳಿಗೆ ನೇರ ಹೊಣೆಯಾಗಲಿದೆ. ಬದ್ಧತೆ ಇದ್ದರೆ ಪ್ರಕರಣವನ್ನು ಹಗುರವಾಗಿ ತೆಗೆದುಕೊಳ್ಳಬಾರದು. 'ಅರಮನೆಗೆ ಈಗ ಸುರಕ್ಷತೆ ಇಲ್ಲವಾಗಿದೆ. ಯಾರು ಬೇಕಾದರೂ ಬರಬಹುದು ಎಂಬಂತಾಗಿದೆ. ವಿಶ್ವವಿಖ್ಯಾತವಾದ ಈ ಪ್ರವಾಸಿ ತಾಣಕ್ಕೆ ಒದಗಿಸಿರುವ ರಕ್ಷಣೆ ಯಾವುದಕ್ಕೂ ಸಾಲದು. ಕೂಡಲೇ ಕೇಂದ್ರೀಯ ಕೈಗಾರಿಕಾ ಪಡೆಯನ್ನು ನಿಯೋಜಿಸಬೇಕು. ಮೃತಪಟ್ಟವರ ಕುಟುಂಬದವರಿಗೆ ಸೂಕ್ತ ಪರಿಹಾರ ನೀಡಬೇಕು' ಎಂದು ಒತ್ತಾಯಿಸಿದರು.

'ಬೀದಿಬದಿಯಲ್ಲಿ ಸುರಕ್ಷತೆ ಇಲ್ಲದ ಸಾಧನಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುವುದನ್ನು ನಿಯಂತ್ರಿಸಲು ನೀತಿ ರೂಪಿಸಬೇಕು. ಚಾಮುಂಡಿಬೆಟ್ಟದ ಸುತ್ತಲೂ ಅಭಿವೃದ್ಧಿ ಹೆಸರಿನಲ್ಲಿ ನಡೆಯುತ್ತಿರುವ ನಿರ್ಮಾಣ ಕಾಮಗಾರಿಗಳಿಗೆ ನಿರ್ಬಂಧ ಹೇರಬೇಕು. ಬೆಟ್ಟವನ್ನು ನೈಸರ್ಗಿಕವಾಗಿ ಉಳಿಸಿಕೊಳ್ಳಬೇಕು' ಎಂದು ಆಗ್ರಹಿಸಿದರು. ಪಕ್ಷದ ನಗರ ಜಿಲ್ಲಾ ಘಟಕದ ಅಧ್ಯಕ್ಷ ಎಲ್.ನಾಗೇಂದ್ರ, 'ಅಕ್ರಮಗಳು ನಡೆಯುತ್ತಿದ್ದರೂ ನಗರ ಪೊಲೀಸ್ ಆಯುಕ್ತರು ಕಣ್ಣು ಮುಚ್ಚಿ ಕೂರಬಾರದು. ಅರಮನೆ ಉಳಿಸಬೇಕು, ಪಾದಚಾರಿ ಮಾರ್ಗಗಳ ಒತ್ತುವರಿ ತೆರವುಗೊಳಿಸಬೇಕು' ಎಂದು ಒತ್ತಾಯಿಸಿದರು.

### ಈಗ ನೆಪ ಮಾತ್ರಕ್ಕಷ್ಟೆ ಭದ್ರತೆ ಇದೆ

**ಈಗ ನೆಪ ಮಾತ್ರಕ್ಕಷ್ಟೆ ಭದ್ರತೆ ಇದೆ. ಅರಮನೆಗೆ ದುರಂತವಾದರೆ ಸರ್ಕಾರದಿಂದ ಬೆಲೆ ಕಟ್ಟಿಕೊಡಲಾದೀತೇ?. ಸರ್ಕಾರವು ಇದನ್ನು ಆದಾಯದ ಮೂಲವೆಂದು ಪರಿಗಣಿಸಿದೆಯೇ ಹೊರತು ಪಾರಂಪರಿಕ ಆಸ್ತಿ ಎಂದು ಪರಿಗಣಿಸಿಲ್ಲ' ಎಂದು ದೂರಿದರು. 'ವಿದೇಶಗಳಲ್ಲಿರುವಂತೆ, ಅರಮನೆಗೆ ಬರುವ ಪ್ರವಾಸಿಗರು ಹಾಗೂ ಸಂದರ್ಶಕರ ಮೇಲೆ ನಿಯಂತ್ರಣ ಹೇರಬೇಕು. 'ಮುಖ್ಯಮಂತ್ರಿಗೆ ಅರಮನೆ, ಮಹಾರಾಜರೆಂದರೆ ಹಿಂದಿನಿಂದಲೂ ಉಡಾಫೆಯೇ. ಪಾರಂಪರಿಕ ಕಟ್ಟಡಗಳ ರಕ್ಷಣೆಗೆ ಬಿಡಿಗಾಸನ್ನೂ ಕೊಟ್ಟಿಲ್ಲ. ಅವು ಅನಾಥಪ್ರಜ್ಞೆಯಲ್ಲಿವೆ' ಎಂದು ಆರೋಪಿಸಿದರು. 'ಮುಂದಾದರೂ, ಅರಮನೆಯ ಸುರಕ್ಷತೆಯ ದೃಷ್ಟಿಯಿಂದ ದಿನಕ್ಕೆ ಇಂತಿಷ್ಟೇ ಪ್ರವೇಶವೆಂದು ನಿರ್ಬಂಧಿಸಬೇಕು. ಸ್ಫೋಟ ಪ್ರಕರಣವನ್ನು ಮುಚ್ಚಿ ಹಾಕದೇ ವಿಸ್ತೃತ ತನಿಖೆ ನಡೆಸಬೇಕು. ಬೀದಿಬದಿ ವ್ಯಾಪಾರಿಗಳಿಗೆ ನಿರ್ದಿಷ್ಟ ಜಾಗ ಕೊಟ್ಟು, ಗುರುತಿನ ಚೀಟಿ ನೀಡಿ ವ್ಯವಸ್ಥಿತಗೊಳಿಸಬೇಕು. ಈ ಮೂಲಕ ಪಾದಚಾರಿಗಳ ಹಕ್ಕು ರಕ್ಷಿಸಬೇಕು' ಎಂದು ಒತ್ತಾಯಿಸಿದರು.**

ಮಾಜಿ ಮೇಯರ್ ಶಿವಕುಮಾರ್, ವಕ್ತಾರ ಮಹೇಶ್‌ರಾಜೇ ಅರಸ್, ಎಸ್‌ಟಿ ಮೋರ್ಚಾ ಅಧ್ಯಕ್ಷ ರಾಮಕೃಷ್ಣ ಹಾಗೂ ಯುವ ಮೋರ್ಚಾ ಅಧ್ಯಕ್ಷ ರಾಕೇಶ್ ಪಾಲ್ಗೊಂಡಿದ್ದರು.

# ವನ್ಯಜೀವಿಗಳನ್ನು ಒಳಗೊಂಡ ನೂತನ ದಿನದರ್ಶಿಕೆ ಬಿಡುಗಡೆ



ಮೈಸೂರು: ಪತ್ರಿಕಾ ಹಾಗೂ ವನ್ಯಜೀವಿ ಛಾಯಾಗ್ರಾಹಕರಾದ ಎಸ್.ಆರ್. ಮಧುಸೂದನ್ ಹಾಗೂ ರವಿಶಂಕರ್ ಹೊರ ತಂದಿರುವ ವನ್ಯಜೀವಿ, ಮೈಸೂರು ಸುತ್ತಮುತ್ತಲಿನ ಅಪರೂಪದ ಪಕ್ಷಿಗಳನ್ನು ಒಳಗೊಂಡಿರುವ ನೂತನ ವರ್ಷದ ಕ್ಯಾಲೆಂಡರನ್ನು ಜಿಲ್ಲಾ ಪತ್ರಕರ್ತರ ಸಂಘದಲ್ಲಿ ಗಣ್ಯರು ಬಿಡುಗಡೆಗೊಳಿಸಿದರು.

ವನ್ಯಜೀವಿ ಛಾಯಾಗ್ರಾಹಕ ಕೃಪಾಕರ್ ಮಾತನಾಡಿ, ಕ್ಯಾಲೆಂಡರ್ ಸಂಸ್ಕೃತಿಗೆ ಬಹು ದೊಡ್ಡ ಇತಿಹಾಸವಿದೆ. ಮೊದಲು ದೇವರ ಫೋಟೋಗಳು ಇದ್ದ ಕ್ಯಾಲೆಂಡರ್‌ಗಳೇ ಎಲ್ಲೆಲ್ಲೂ ಕಾಣಿಸುತ್ತಿದ್ದವು. ಆದರೆ, ಈಗ ಕಾಲ ಬದಲಾಗಿದೆ. ಕ್ಯಾಲೆಂಡರ್‌ಗಳಲ್ಲಿ ಈಗ ಇರುವ ವಿಷಯಗಳೇ ಬೇರೆಯಾಗಿವೆ. ಸದ್ಯದಲ್ಲಿ ಮಾನವ– ಹುಲಿ ಸಂಘರ್ಷ ಹೆಚ್ಚು ಚರ್ಚೆಗೆ ಒಳಗಾಗುತ್ತಿದೆ. ಆದರೆ, ವನ್ಯಜೀವಿಗಳನ್ನೂ ವೈಜ್ಞಾನಿಕ ಮನೋಭಾವದಿಂದ ನೋಡಬೇಕಾದ ಅಗತ್ಯವಿದೆ. ವೈಜ್ಞಾನಿಕ ಬೆಳವಣಿಗೆಯನ್ನು ಈ ನಿಟ್ಟಿನಲ್ಲಿ ನಾವು ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿಲ್ಲ. ಇದೇ ವೇಳೆ ಮಾನವ– ಹುಲಿ ಸಂಘರ್ಷಕ್ಕೆ ಕಾರಣವೇನು ಎಂಬ ಬಗ್ಗೆಯೂ ಚಿಂತನೆ ನಡೆಸಬೇಕಾಗಿದೆ. ಪ್ರಾಣಿಗಳ ಸಂರಕ್ಷಣೆಯಲ್ಲಿ ನಮ್ಮ ಹೊಣೆಗಾರಿಕೆ ಏನು ಎಂಬ ಬಗ್ಗೆಯೂ ಯೋಚಿಸಬೇಕು. ಈಗ ಬಿಡುಗಡೆಗೊಳಿಸಿರುವ ಕ್ಯಾಲೆಂಡರ್‌ನಲ್ಲಿನ ವನ್ಯಜೀವಿ, ಪಕ್ಷಿಗಳ ಚಿತ್ರಗಳು ಅಂತಹ ಕೆಲಸ ಮಾಡುತ್ತವೆ ಎಂದರು.

ಮತ್ತೋರ್ವ ವನ್ಯಜೀವಿ ಛಾಯಾಗ್ರಾಹಕ ಸೇನಾನಿ ಮಾತನಾಡಿ, ಇಂದಿನ ದಿನಗಳಲ್ಲಿ ಹುಲಿಯನ್ನು ಖಳ ಎಂದು ಬಿಂಬಿಸಲಾಗುತ್ತಿದೆ. ಆದರೆ ಈ ಕ್ಯಾಲೆಂಡರ್ ಹುಲಿಯ ಬಗ್ಗೆ ಪ್ರೀತಿ ಮೂಡಿಸುವ ಕೆಲಸ ಮಾಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ನಿವೃತ್ತ ಅರಣ್ಯಾಧಿಕಾರಿ ಕಾಂತರಾಜು ಮಾತನಾಡಿ, ಹುಲಿ ಎಂದಿಗೂ ನರಭಕ್ಷಕ ಆಗುವುದಿಲ್ಲ. ಆದರೆ ತನ್ನ ರಕ್ಷಣೆಗಾಗಿ ಮಾತ್ರ ದಾಳಿ ಮಾಡುತ್ತದೆ. ಹೀಗಾಗಿ ಪ್ರಾಣಿಗಳಿಗೂ ಸಹಾ ನಮ್ಮಷ್ಟೇ ಪ್ರಾಧಾನ್ಯತೆ ನೀಡಬೇಕೆಂದರು. ಎಸ್.ಆರ್.ಮಧುಸೂದನ್ ಮಾತನಾಡಿ, ವನ್ಯಜೀವಿಗಳ ಬಗ್ಗೆ ಅರಿವು ಸಾಮಾನ್ಯ ಜನರಿಗೂ ಮೂಡುವಂತೆ ಮಾಡುವ ಉದ್ದೇಶ ಈ ಕ್ಯಾಲೆಂಡರ್‌ನದ್ದಾಗಿದೆ. ಮಾನವ– ವನ್ಯಜೀವಿ ಸಂಘರ್ಷ ಚರ್ಚೆಗೆ ಒಳಗಾಗುತ್ತಿರುವ ಈ ದಿನಗಳಲ್ಲಿ ಪ್ರಾಣಿಗಳ ಬಗ್ಗೆ ಕಾಳಜಿ, ದಯೆ ಮೂಡಿಸುವ ನಿಟ್ಟಿನಲ್ಲಿಯೂ ಕ್ಯಾಲೆಂಡರ್ ರೂಪಗೊಂಡಿದೆ ಎಂದರು. ಛಾಯಾಗ್ರಾಹಕ ರವಿಶಂಕರ್, ಸ್ನೇಕ್ ಶ್ಯಾಮ್, ಮಹೇಶ್‌ಕುಮಾರ್ ಇನ್ನಿತರರು ಇದ್ದರು.

ಮೊದಲ ಪುಟದಿಂದ

### ಸ್ಫೋಟಕ ಬೆರಕೆ ಶಂಕೆ?

ಎದ್ದಿದೆ. ಸೈಕಲ್‌ನಲ್ಲಿ ಹೀಲಿಯಂ ಬಲೂನ್ ಮಾರುತ್ತಿದ್ದಾಗ ರಾತ್ರಿ ಸಿಲಿಂಡರ್ ಸ್ಫೋಟವಾಗಿದೆ. ಪ್ರತ್ಯಕ್ಷದರ್ಶಿ ಅರಮನೆಯ ಗೈಡ್ ನೀಡಿದ ಮಾಹಿತಿ ಪ್ರಕಾರ ಬಲೂನ್ ಮಾರಾಟಗಾರ ಅರಮನೆ ಮುಂಭಾಗದಲ್ಲಿ ನಿಂತು ಯಾವತ್ತೂ ಬಲೂನ್ ಮಾರುತ್ತಿರಲಿಲ್ಲ. ಆತ ಬಂದ ಕೂಡಲೇ ಸ್ಫೋಟ ಸಂಭವಿಸಿದೆ ಎಂದು ತಿಳಿಸಿದ್ದಾರೆ. ಗುರುವಾರ ಈ ಜಾಗದಲ್ಲಿ ನಿಂತು ಬಲೂನು ಮಾರಾಟ ಮಾಡಿರಲಿಲ್ಲ. ಹಾಗಾದರೆ ಅರಮನೆ ಮುಂಭಾಗವೇ ಸಿಲಿಂಡರ್ ಸ್ಫೋಟ ಯಾಕಾಯ್ತು ಎಂಬ ಪ್ರಶ್ನೆ ಹುಟ್ಟಿಕೊಂಡಿದೆ.

ಸಿಲಿಂಡರ್ ಸ್ಫೋಟ ಆಕಸ್ಮಿಕವೇ? ಅಥವಾ ಉದ್ದೇಶಪೂರ್ವಕವೇ? ಯಾವತ್ತೂ ಅರಮನೆ ಮುಂಭಾಗದಲ್ಲಿ ಕಾಣಿಸಿಕೊಳ್ಳದವನೂ ರಾತ್ರಿ ಜನಸಂದಣಿ ಸಂದರ್ಭದಲ್ಲಿಯೇ ಇಲ್ಲಿಗೆ ಬಂದಿದ್ದು ಯಾಕೆ? ಏಕಾಏಕಿ ಅರಮನೆ ಮುಂಭಾಗವೇ ಸಿಲಿಂಡರ್ ಸ್ಫೋಟ ಯಾಕಾಯಿತು ಎಂಬ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಪೊಲೀಸರು ಈಗ ತನಿಖೆ ಆರಂಭಿಸಿದ್ದಾರೆ.

ಅರಮನೆ ಬಳಿ ವಸ್ತುಗಳನ್ನು ಮಾರಾಟ ಮಾಡುವವರು ಸಾಮಾನ್ಯವಾಗಿ ಮೈಸೂರಿನ ಅಸುಪಾಸಿನ ಜನರೇ ಆಗಿರುತ್ತಾರೆ. ಈಗ ಬಲೂನ್ ಮಾರುತ್ತಿದ್ದ ವ್ಯಕ್ತಿಯ ಹಿನ್ನೆಲೆಯ ಬಗ್ಗೆ ಈಗ ತನಿಖೆ ಶುರುವಾಗಿದೆ. ಉತ್ತರ ಪ್ರದೇಶ ಮೂಲದ ಸಲೀಂ ಮೈಸೂರಿಗೆ ಬಂದಿದ್ದು ಯಾವಾಗ? ಎಷ್ಟು ವರ್ಷದಿಂದ ಬಲೂನ್ ಮಾರುತ್ತಿದ್ದ? ಅರಮನೆ ಮುಂಭಾಗವೇ ಸಲೀಂ ನಿರಂತರವಾಗಿ ಬಲೂನ್ ಮಾರುತ್ತಿದ್ದನೇ ಅಥವಾ ಮೊದಲು ಬಂದಿದ್ದನೇ ಎಂಬ ಪ್ರಶ್ನೆಗೆ ಉತ್ತರ ತಿಳಿಯಲು ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

### ಸಲೀಂ 5 ಎಕರೆ ಭೂ ಮಾಲೀಕ:

ಇದಕ್ಕೆ ಸಂಬಂಧಿಸಿದಂತೆ ತನಿಖೆ ಚುರುಕುಗೊಂಡಿದೆ. ಉತ್ತರ ಪ್ರದೇಶದ ಪೊಲೀಸರ ಜೊತೆಗೆ ಮೈಸೂರು ಪೊಲೀಸರು ನಿರಂತರ ಸಂಪರ್ಕದಲ್ಲಿದ್ದು ಸಲೀಂ ಹಿನ್ನೆಲೆ ಬಗ್ಗೆ ಆಳವಾದ ತನಿಖೆ ನಡೆಯುತ್ತಿದೆ. ಕನೋಜ್ ಜಿಲ್ಲೆಯ ತೊಫಿಯಾ ಗ್ರಾಮದ ನಿವಾಸಿಯಾಗಿರುವ ಸಲೀಂ ಊರಿನಲ್ಲಿ ಕೃಷಿ ಮಾಡುತ್ತಿದ್ದ. ಈತನಿಗೆ 5 ಎಕ್ರೆ ಜಮೀನು ಇದ್ದು ಇಷ್ಟು ವರ್ಷ ಕೃಷಿ ಕೆಲಸವನ್ನೇ ಮಾಡುತ್ತಿದ್ದ. ಕೃಷಿ ಕೆಲಸ ಬಿಟ್ಟು ಒಂದು ತಿಂಗಳ ಹಿಂದೆ ಮೈಸೂರಿಗೆ ಬಂದಿದ್ದ. ಕೃಷಿ ಕೆಲಸ ಬಿಟ್ಟು ಮೈಸೂರಿಗೆ ಬಲೂನ್ ಮಾರಾಟ ಮಾಡಲು ಬಂದಿದ್ದು ಯಾಕೆ ಎಂಬ ಮಾಹಿತಿಯನ್ನು ಸಲೀಂ ಕುಟುಂಬಸ್ಥರಿಂದ ಈಗ ಪೊಲೀಸರು ಸಂಗ್ರಹಿಸುತ್ತಿದ್ದಾರೆ. 5 ಎಕರೆ ಜಮೀನು ಇದ್ದರೂ ಬಲೂನು ಮಾರಾಟಕ್ಕೆ ಇಳಿದ್ದಿದ್ದು ಯಾಕೆ? ಅದರಲ್ಲೂ ಮೈಸೂರು ಅರಮನೆ ಮುಂಭಾಗದಲ್ಲಿ ಮಾರಾಟಕ್ಕೆ ಇಳಿದಿದ್ದು ಯಾಕೆ ಎನ್ನುವ ಪ್ರಶ್ನೆಗೆ ಉತ್ತರ ಸಿಗಬೇಕಿದೆ.

### ಜೊತೆಗಾರರ ವಿಚಾರಣೆ

**ಬಲೂನ್ ಮಾರಾಟ ಮಾಡಲು ಹೋಗಿದ್ದ. ಮತ್ತಿಬ್ಬರು ನಿನ್ನೆ ರೂಂನಲ್ಲಿಯೇ ಇದ್ದರು. ಲಾಡ್ಜ್ ಮುಂಭಾಗದಲ್ಲೇ ಎರಡು ಸೈಕಲ್ ನಿಂತಿದ್ದವು.**

### ಬಡವರ ಬೆನ್ನಿಗೆ ಇರಿದ ಮೋದಿ

ಹೆಸರಿನ ಯೋಜನೆಯಿಂದ ದೇಶದ ಒಂದು ಪೀಳಿಗೆ ಬಡತನದಿಂದ ಪಾರಾಗಿತ್ತು. ಆದರೆ, ಯಾವುದೇ ಅಧ್ಯಯನ ಅಥವಾ ಮೌಲ್ಯಮಾಪನವಿಲ್ಲದೆ. ರಾಜ್ಯಗಳು ಅಥವಾ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸದೆ, ಮೂರು ಕರಾಳ ಕೃಷಿ ಕಾನೂನುಗಳನ್ನು ತರಲು ಬಳಸಿದ ಅದೇ ವಿಧಾನವನ್ನು ಅನುಸರಿಸಿ 'ವಿಬಿ–ಜಿ ರಾಮ್ ಜಿ' ಕಾಯ್ದೆಯನ್ನು ಹೇರಲಾಗಿದೆ ಎಂದು ವಾಗ್ದಾಳಿ ನಡೆಸಿದರು.

ಯಾವುದೇ ಸರ್ವಾಧಿಕಾರಿ ಜನರ ಹಕ್ಕುಗಳನ್ನು ಕಸಿಯಲು ಸಾಧ್ಯವಿಲ್ಲ ಎಂದು 76 ವರ್ಷಗಳಲ್ಲಿ ಸಂವಿಧಾನ ನಮಗೆ ಕಲಿಸಿದೆ. ನರೇಗಾ ರದ್ದು ವಿರುದ್ಧ ನಿರ್ದಿಷ್ಟ ಹೋರಾಟದ ಯೋಜನೆಯನ್ನು ಸಿದ್ಧಪಡಿಸುವುದು ಮತ್ತು ರಾಷ್ಟ್ರವ್ಯಾಪಿ ಸಾಮೂಹಿಕ ಆಂದೋಲನ ಮಾಡುವುದು ನಮ್ಮ ಸಾಮೂಹಿಕ ಜವಾಬ್ದಾರಿಯಾಗಿದೆ. ನಾವು ಈ ಯುದ್ಧದಲ್ಲಿ ಗೆಲ್ಲುತ್ತೇವೆ ಎಂದು ಹೇಳಿದರು.

# ಪಾಸ್‌ಪೋರ್ಟ್ ಕಚೇರಿ ಖಾಸಗಿ ಬಳಕೆ ಅಕ್ಷಮ್ಯ: ಸಂಸದ ಯದುವೀರ್ ಒಡೆಯರ್



ಮೈಸೂರು: ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ನಿರ್ಮಿಸಲಾಗಿರುವ ಪ್ರಾದೇಶಿಕ ಪಾಸ್‌ಪೋರ್ಟ್ ಕಚೇರಿ ಕಟ್ಟಡವನ್ನು ಖಾಸಗಿ ಉದ್ದೇಶಕ್ಕೆ ಬಳಸುವುದು ಅಕ್ಷಮ್ಯ. ಇದೊಂದು ಗಂಭೀರ ವಿಷಯವಾಗಿದ್ದು, ಈ ಬಗ್ಗೆ ಸಂಬಂಧಪಟ್ಟ ಸಚಿವಾಲಯಕ್ಕೆ ಮಾಹಿತಿ ನೀಡಿ ಕ್ರಮ ಕೈಗೊಳ್ಳಲು ಮನವಿ ಸಲ್ಲಿಸಲಾಗುವುದು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.



ಈ ವಿಷಯದಲ್ಲಿ ಯಾವುದೇ ಕಾರಣಕ್ಕೂ ರಾಜೀ ಇಲ್ಲ. ಇಟ್ಟಿಗೆಗೂಡು ಪ್ರದೇಶದಲ್ಲಿ ಮೈಸೂರು ಅಭಿವೃದ್ಧಿ ಪ್ರಾಧಿಕಾರ ವತಿಯಿಂದ ಪಾಸ್‌ಪೋರ್ಟ್ ಕಚೇರಿ ಸ್ಥಾಪನೆಗಾಗಿ ನಿರ್ಮಿಸಲಾದ ಸರ್ಕಾರಿ ಕಟ್ಟಡವನ್ನು ಹಲವು ವರ್ಷಗಳಿಂದ ಅದರ ಉದ್ದೇಶಕ್ಕೆ ಬಳಸದೆ ಖಾಸಗಿ ವ್ಯಕ್ತಿಗಳಿಗೆ/ಸಂಸ್ಥೆಗಳಿಗೆ ನೀಡಲಾಗಿದೆ ಎಂಬುದು ನನ್ನ ಗಮನಕ್ಕೆ ಬಂದಿದೆ. ಇದು ಅತ್ಯಂತ ಗಂಭೀರ ಮತ್ತು ನಿಯಮಬಾಹಿರ ವಿಷಯವಾಗಿದೆ. ಸಾರ್ವಜನಿಕ ಉದ್ದೇಶಕ್ಕಾಗಿ ಸರ್ಕಾರದ ಹಣದಿಂದ ನಿರ್ಮಿಸಲಾದ ಕಟ್ಟಡವನ್ನು ಖಾಸಗಿ ಬಳಕೆಗೆ ನೀಡಿರುವುದು ನಿಯಮಗಳ ಉಲ್ಲಂಘನೆಯಾಗಿದೆ. ಇದರಿಂದ ಸಾರ್ವಜನಿಕರಿಗೆ ಸಿಗಬೇಕಾದ ಸೌಲಭ್ಯಗಳನ್ನು ಕಸಿದುಕೊಂಡಂತಾಗುತ್ತದೆ. ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು, ವಿಷಯವನ್ನು ತಕ್ಷಣ ಪರಿಶೀಲಿಸಿ, ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಮತ್ತು ಪಾಸ್‌ಪೋರ್ಟ್ ಕಚೇರಿಯನ್ನು ಅದೇ ಕಟ್ಟಡದಲ್ಲಿ ಶೀಘ್ರದಲ್ಲಿ ಪ್ರಾರಂಭಿಸುವಂತೆ ಸೂಚಿಸಲಾಗಿದೆ ಎಂದರು.

ಅಗತ್ಯಬಿದ್ದರೆ ಸಂಬಂಧಬಿಟ್ಟ ಸಚಿವರಿಗೂ ಪತ್ರ ಬರೆದು ಸೂಕ್ತ ಸೂಚನೆ ನೀಡುವಂತೆ ಮನವಿ ಸಲ್ಲಿಸುತ್ತೇನೆ. ಮೈಸೂರು ಮತ್ತು ಸುತ್ತಮುತ್ತಲ ಪ್ರದೇಶದ ಜನರಿಗೆ ಪಾಸ್‌ಪೋರ್ಟ್ ಸೇವೆಗಳು ಸುಲಭವಾಗಿ ಲಭ್ಯವಾಗಬೇಕಾದ್ದರಿಂದ, ಈ ವಿಷಯದಲ್ಲಿ ಯಾವುದೇ ವಿಳಂಬವಾಗದಂತೆ ಸರ್ಕಾರ ಹಾಗೂ ಸಂಬಂಧಿಸಿದ ಅಧಿಕಾರಿಗಳು ತ್ವರಿತವಾಗಿ ಕ್ರಮ ವಹಿಸಬೇಕು ಎಂದು ಹೇಳಿದರು.

ಮೊದಲ ಪುಟದಿಂದ

### ಬುಲ್ಡೋಜರ್ ಸಂಸ್ಕೃತಿ ನಮ್ಮಲ್ಲಿಲ್ಲ

ಜಾಗ ಬೇಕಾಗಿದ್ದರೆ ಅವರು ಅರ್ಹರಾಗಿದ್ದರೆ ಅವರಿಗೆ ಸರ್ಕಾರ ವಸತಿ ನೀಡಲಿದೆ. ಬೇರೆ ಸರ್ಕಾರಗಳು ಜನರಿಗೆ ಮನೆ ಕಟ್ಟಿಕೊಡಲು ಸಾಧ್ಯವಾಗಿರಲಿಲ್ಲ. ನಮ್ಮ ಸರ್ಕಾರ ಬಡವರಿಗೆ ಲಕ್ಷಾಂತರ ಮನೆ ನಿರ್ಮಾಣ ಮಾಡಿದೆ ಎಂದರು.

### ಪಿಣರಾಯಿ ಚುನಾವಣೆ ಗಿಮಿಕ್

ಮಾಡುತ್ತೇವೆ. ನಾವೂ ಬುಲ್ಡೋಜರ್ ಪದ್ಧತಿ ಬಳಸಿಲ್ಲ. ಈ ಕುರಿತು ನಮ್ಮ ಪಕ್ಷದ ನಾಯಕರಿಗೂ ಮಾಹಿತಿ ನೀಡಿದ್ದೇವೆ. ಅವರು ಇಲ್ಲಿನ ಸ್ಥಿತಿ ತಿಳಿದುಕೊಳ್ಳದೆ ಮಾತನಾಡುವುದು ಸರಿಯಲ್ಲ ಎಂದು ತಿರುಗೇಟು ನೀಡಿದರು.

ಸರ್ಕಾರಿ ಜಾಗ ಒತ್ತುವರಿ ಮಾಡಲು ಬಿಡಲ್ಲ. ಚುನಾವಣೆ ಸಂದರ್ಭದಲ್ಲಿ ಪಿಣರಾಯಿ ಅವರು ರಾಜಕೀಯ ಗಿಮಿಕ್ ಮಾಡುವುದು ಬೇಡ. ಸರ್ಕಾರಿ ಜಾಗದಲ್ಲಿ ಸ್ಲಂಗಳನ್ನು ಮಾಡಲು ಬಿಡುವುದಿಲ್ಲ ಎಂದು ತಿಳಿಸಿದ್ದಾರೆ.

### ಸಿದ್ದು ಕೊಟ್ಟರೆ ಡಿಕೆಶಿಗೆ ಗದ್ದುಗೆ!

ಕಷ್ಟವಿದೆ. ಕೇಂದ್ರದಲ್ಲೂ ಪರಿಸ್ಥಿತಿ ಬದಲಾವಣೆ ಕಷ್ಟ ಎಂದ ಸ್ವಾಮೀಜಿ ಭವಿಷ್ಯ ನುಡಿದಿದ್ದಾರೆ.

### ವಲಸಿಗರಾದರೂ ಜಾಗ

ನಮ್ಮ ಮಾತನ್ನು ಕೇಳಲಿಲ್ಲ. ಹೀಗಾಗಿ ತೆರವು ಕಾರ್ಯಾಚರಣೆ ನಡೆಸಿ ಜಾಗವನ್ನು ಖಾಲಿ ಮಾಡಿಸಿದ್ದಾರೆ ಎಂದರು.

**ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ ಮನವಿ**

# ಜಾನಪದ ಅಕಾಡೆಮಿ ಬೆಳವಣಿಗೆಗೆ ಅನುದಾನ ಕೊಡಿ



ಮೈಸೂರು: ದೇಶದಲ್ಲೇ ಸಾಂಸ್ಕೃತಿಕವಾಗಿ ಶ್ರೀಮಂತವಾಗಿರುವ ರಾಜ ಎನಿಸಿಕೊಂಡಿರುವ ರಾಜ್ಯದಲ್ಲಿರುವ ಜನಪದ ಕಲೆ ಹಾಗೂ ಜನಪದ ಅಕಾಡೆಮಿಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಸರ್ಕಾರ ಅನುದಾನ ನೀಡಬೇಕೆಂದು ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ ಹೇಳಿದರು.

ನಗರದ ಕಲಾಮಂದಿರದ ಆವರಣದ ಕಿರುರಂಗ ಮಂದಿರದಲ್ಲಿ ಶನಿವಾರ ನಡೆದ ಶರಣೆಂದೆ ಭೂಮಿ ತಾಯಿಗೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಇತ್ತೀಚಿನ ದಿನಗಳಲ್ಲಿ ಸರ್ಕಾರ ಅಕಾಡೆಮಿಗೆ ಎಷ್ಟು ಹಣ ಬೇಕೋ ಅಷ್ಟು ಹಣವನ್ನು ಒದಗಿಸದೆ ಇರುವ ಕಾರಣದಿಂದ ಹಾಗೂ ಯಾರೇ ಹಣ ಸಂಗ್ರಹಿಸಿದರೂ ಮತ್ತು ಜಾನಪದದಲ್ಲಿ ಯಾವುದೇ ಪ್ರಕಾರವನ್ನು ಸಂಗ್ರಹಿಸಲಿ ಅದನ್ನು ನಾನು ಪ್ರಕಟಿಸುತ್ತೀನಿ ಎನ್ನುವ ಧೈರ್ಯ ಅಕಾಡೆಮಿಗೆ ಬರಬೇಕು. ಇಲ್ಲದಿದ್ದರೆ ಅಕಾಡೆಮಿಯೂ ಇದ್ದೂ ನಿಷ್ಪ್ರಯೋಜಕವಾಗುತ್ತದೆ. ಜಾನಪದ ಕ್ಷೇತ್ರದಲ್ಲಿ ಬೇಕಾದಷ್ಟು ಕೆಲಸ ಮಾಡಬೇಕು. ಗಾದೆಗಳು, ಒಗಟುಗಳು, ಕಥೆಗಳು, ಐತಿಹ್ಯಗಳು, ಪುರಾಣಗಳು, ಅಡುಗೆಗಳು, ಉಡುಗೆಗಳು, ವ್ಯವಸ್ಯಾಯ ಸೇರಿದಂತೆ ಪ್ರತಿಯೊಂದು ಇದೆ. ನಮ್ಮಲ್ಲಿರುವ 18 ಕುಲಕಬುಗಳು ಅವೆಲ್ಲವೂ ನಮ್ಮ ಗ್ರಾಮೀಣ ಪ್ರದೇಶದಲ್ಲಿದೆ. ಇದನ್ನೆಲ್ಲ ಶಾಸ್ತ್ರೀಯವಾಗಿ ಸಂಗ್ರಹಿಸಬೇಕಿದೆ, ಸಂಪಾದಿಸಬೇಕಿದೆ ಹಾಗೂ ಪ್ರಕಟಿಸಬೇಕಿದೆ ಎಂದು ತಿಳಿಸಿದರು.

ಇಂದು ಹತ್ತಕ್ಕೂ ಹೆಚ್ಚು ಜನಪದ ಮಹಾಕಾವ್ಯಗಳು ಕನ್ನಡದಲ್ಲಿವೆ ಎಂಬದುನ್ನು ವಿವಿಧ ಸ್ಥಳಗಳಲ್ಲಿರುವ ಜಾನಪದ ವಿದ್ವಾಂಸರು ಪ್ರಕಟಿಸಿದ್ದಾರೆ. ನಮ್ಮಲ್ಲೂ ಮಂಟೆಸ್ವಾಮಿ, ಮಹದೇಶ್ವರ, ಮಹಾಭಾರತ ರಾಮಾಯಣ, ಗುಂಜಪ್ಪ, ಯಲ್ಲಮ್ಮ ದೇವಿ ಸೇರಿದಂಎ 10ಕ್ಕೂ ಹೆಚ್ಚು ಜನಪದ ಮಹಾಕಾವ್ಯಗಳು ನಮ್ಮಲ್ಲಿ ಪ್ರಕಟವಾಗಿದೆ ಎಂಬ ಹೆಮ್ಮೆ ನಮ್ಮದು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷ ಡಾ.ಗೊಲ್ಲಹಳ್ಳಿ ಶಿವಪ್ರಸಾದ್, ಅಕಾಡೆಮಿಯ ಕುಲಸಚಿವೆ ಎನ್.ನಮ್ರತ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಮುನಿರಾಜು, ಕರ್ನಾಟಕ ಜಾನಪದ ಅಕಾಡೆಮಿಯ ಸದಸ್ಯರಾದ ಮೈಸೂರು ಉಮೇಶ್, ದೇವನಂದ ವರಪ್ರಸಾದ್, ಸಂಚಾಲಕ ಮೈಸೂರು ಜಿ.ಗುರುರಾಜ್ ಹಾಜರಿದ್ದರು.

# ಯೋಗ ನರಸಿಂಹ ಸ್ವಾಮಿ ದೇಲಯದಲ್ಲಿ ಹೊಸ ವರ್ಷಕ್ಕೆ 2ಲಕ್ಷ ಲಾಡು

## ಅಣ್ಣಾವ್ರ ಪ್ರೇರಣೆಯಂತೆ ಇಂದಿಗೂ ನಡೆಯುತ್ತಿದೆ ಯೋಗ ನರಸಿಂಹ ಸ್ವಾಮಿ ದೇವಾಲಯದ ದಾಸೋಹ

ಮೈಸೂರು: ದಿ.ಡಾ.ರಾಜಕುಮಾರ್ ಅವರಿಂದ ಪ್ರೇರಣೆಗೊಂಡ ವಿಜಯನಗರದ ಯೋಗ ನರಸಿಂಹ ಸ್ವಾಮಿ ದೇವಾಲಯದಲ್ಲಿ ಪ್ರತಿ ವರ್ಷದಂತೆ ಈ ಬಾರಿಯೂ ಹೊಸ ವರ್ಷಕ್ಕೆ ಭಕ್ತರಿಗೆ 2ಲಕ್ಷ ಲಾಡುಗಳನ್ನು ಉಚಿತವಾಗಿ ವಿತರಿಸಲು ಸಕಲ ರೀತಿಯಲ್ಲೂ ಸಜ್ಜಾಗಿದೆ.

ಈ ಕುರಿತು ಸುದ್ದಿಗೋಷ್ಠಿ ನಡೆಸಿದ ಯೋಗಾನರಸಿಂಗಸ್ವಾಮಿ ದೇಗುಲದ ಸಂಸ್ಥಾಪಕ ಪ್ರೊ.ಭಾಷ್ಯಂ ಸ್ವಾಮೀಜಿ ಮಾತನಾಡಿ, ನೂತನ ವರ್ಷವನ್ನು ಸ್ವಾಗತಿಸಲು ಸಾಂಸ್ಕೃತಿಕ ನಗರಿ ಮೈಸೂರು ಸಜ್ಜಾಗುತ್ತಿದ್ದು, ಲೋಕ ಕಲ್ಯಾಣದೊಂದಿಗೆ ಹೊಸ ವರ್ಷವನ್ನು ಸಂಭ್ರಮದಿಂದ ಸ್ವಾಗತಿಸಲು ವಿಜಯನಗರದ ಯೋಗ ನರಸಿಂಹಸ್ವಾಮಿ ದೇವಸ್ಥಾನದಲ್ಲಿ 2ಲಕ್ಷ ಲಡ್ಡುಗಳನ್ನು ತಯಾರಿಸಲಾಗುತ್ತಿದೆ. ಜ.1ರಂದು ದೇವಸ್ಥಾನಕ್ಕೆ ಬರುವ ಭಕ್ತರಿಗೆ ಲಡ್ಡುಗಳನ್ನು ವಿತರಿಸಲಾಗುತ್ತಿದ್ದು, ಅದಕ್ಕಾಗಿ ತಿರುಪತಿ ಮಾದರಿಯ 2 ಲಕ್ಷ ಲಡ್ಡುಗಳು ಸಿದ್ಧವಾಗುತ್ತಿವೆ. ಅಂದು ಬೆಳಗ್ಗೆ 4 ಗಂಟೆಯಿಂದ ರಾತ್ರಿ 12 ಗಂಟೆಯವರೆಗೆ ಭಕ್ತಾದಿಗಳಿಗೆ ಲಡ್ಡುಗಳನ್ನು ವಿತರಿಸುವ ಕಾರ್ಯಕ್ರಮ ನಡೆಯಲಿದೆ.

1994ರಿಂದ ಲಡ್ಡು ವಿತರಿಸುವ ಕಾರ್ಯವನ್ನು ನಡೆಸಿಕೊಂಡು ಬರಲಾಗಿದ್ದು, ಈ ವರ್ಷವೂ ನೂತನ ವರ್ಷಾರಂಭದ ಅಂಗವಾಗಿ ಜ.1ರ ಬೆಳಗ್ಗೆ 4 ಗಂಟೆಯಿಂದ ಪ್ರಾರಂಭಿಸಿ ಶ್ರೀ ಯೋಗಾನರಸಿಂಹಸ್ವಾಮಿಯವರಿಗೆ ವಿಶೇಷ ಅಲಂಕಾರ ಮತ್ತು ಶ್ರೀರಂಗ, ಮಧುರೈ ಕ್ಷೇತ್ರದಿಂದ ತರಿಸಿರುವ ವಿಶೇಷ ತೋಮಾಲೆ ಮತ್ತು ಸ್ವರ್ಣಪುಷ್ಪದಿಂದ ಶ್ರೀಸ್ವಾಮಿಗೆ ಸಹಸ್ರನಾಮರ್ಚನೆ ಮತ್ತು ದೇವಾಲಯದ ಉತ್ಸವ ಮೂರ್ತಿಯಾದ ರಂಗನಾಥಸ್ವಾಮಿಗೆ ದೇವಾಲಯದ ಆವರಣದಲ್ಲಿ ಏಕಾದಶ ಪ್ರಾಕಾರೋತ್ಸವ ಹಾಗೂ 50 ಕ್ವಿಂಟಾಲ್ ಪುಳಿಯೊಗರೆ ನಿವೇದನೆ ಮಾಡಲಾಗುತ್ತಿದ್ದು, ದೇವಾಲಯಕ್ಕೆ ಆಗಮಿಸುವ ಎಲ್ಲಾ ಭಕ್ತಾದಿಗಳಿಗೆ ಎರಡು ಲಕ್ಷ ತಿರುಪತಿ ಮಾದರಿಯ ಲಡ್ಡು ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.



> ರಾಜಕುಮಾರ್ ದಂಪತಿಗಳ ಪ್ರೇರಣೆಯಿಂದ 1994ರಲ್ಲಿ 1 ಸಾವಿರ ಲಡ್ಡು ವಿತರಣೆಯೊಂದಿಗೆ ಆರಂಭವಾದ ಈ ಸೇವೆ ಇಂದು 2 ಲಕ್ಷ ಲಡ್ಡು ವಿತರಣೆಯೊಂದಿಗೆ ನಿರಾತಂಕವಾಗಿ ನಡೆಯುತ್ತಿದೆ. ಜ.1ರಂದು ಭಕ್ತರು ದೇವಸ್ಥಾನಕ್ಕೆ ಆಗಮಿಸಿ ದೇವರ ದರ್ಶನ ಪಡೆಯುವುದರ ಜತೆಗೆ ಲಡ್ಡು ಪ್ರಸಾದ ಸ್ವೀಕರಿಸಬೇಕು.
>
> **ಎನ್.ಶ್ರೀನಿವಾಸನ್** ದೇವಸ್ಥಾನದ ಆಡಳಿತಾಧಿಕಾರಿ

> ಸರ್ವರಿಗೂ ಸುಖ, ಶಾಂತಿ ನೆಮ್ಮದಿ ದೊರೆಯಲಿ ಎಂದು ಪ್ರಾರ್ಥಿಸಲು ಈ ವಿಶಿಷ್ಟ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ವಿಶ್ವಶಾಂತಿ, ಜಾತೀಯತೆ, ಮತೀಯತೆ ತೊಲಗಿಸಿ ಸಮಾನತೆ, ಸರ್ವಧರ್ಮ ಸಮನ್ವಯತೆ ಆಚರಿಸುವ ಸಲುವಾಗಿ ಹೊಸ ವರ್ಷಾಚರಣೆ ಮಾಡಲಾಗುತ್ತಿದೆ. ವರ್ಷವನ್ನು ಒಳ್ಳೆಯ ಕಾರ್ಯದ ಮೂಲಕ ಆರಂಭಿಸಬೇಕಿರುವ ಹಿನ್ನೆಲೆಯಲ್ಲಿ ವಿಶೇಷ ಸಂಕಲ್ಪ ಮಾಡಿ ಸಾರ್ವಜನಿಕರಿಗೆ ಸಿಹಿ ವಿತರಿಸಲಾಗುತ್ತಿದೆ.
>
> **ಪ್ರೊ.ಭಾಷ್ಯಂ ಸ್ವಾಮೀಜಿ** ದೇವಸ್ಥಾನದ ಸಂಸ್ಥಾಪಕ

ಈ ವರ್ಷ ಅಂದಾಜು 2 ಸಾವಿರ ಗ್ರಾಂ ತೂಕದ 10 ಸಾವಿರ ಲಡ್ಡುಗಳು ಹಾಗೂ 150 ಗ್ರಾಂ ತೂಕದ 2 ಲಕ್ಷ ಲಡ್ಡುಗಳನ್ನು ದೇವಾಲಯಕ್ಕೆ ಬರುವ ಎಲ್ಲಾ ಭಕ್ತಾದಿಗಳಿಗೆ ಯಾವುದೇ ಜಾತಿ, ಮತ ಭೇದವಿಲ್ಲದೆ ಉಚಿತವಾಗಿ ವಿತರಿಸಲಾಗುವುದು. ಲಡ್ಡು ಪ್ರಸಾದವನ್ನು ವಿಶೇಷವಾಗಿ 100 ಮಂದಿ ನುರಿತ ಬಾಣಸಿಗರಿಂದ ತಯಾರಿಸಲಾಗಿದ್ದು, ಡಿ.20ರಿಂದ ಪ್ರಾರಂಭಿಸಿ 31ರವರೆಗೂ ಲಡ್ಡು ತಯಾರಿ ಕಾರ್ಯ ನಡೆಯಲಿದೆ. ಲಡ್ಡು ತಯಾರಿಕೆಗೆ 100 ಕ್ವಿಂಟಾಲ್ ಕಡ್ಲೆಹಿಟ್ಟು, 200 ಕಿಂಟಾಲ್ ಸಕ್ಕರೆ, 10 ಸಾವಿರ ಲೀಟರ್ ಖಾದ್ಯ ತೈಲ, 500 ಕೆ.ಜಿ ಗೋಡಂಬಿ, 500 ಕೆ.ಜಿ ಒಣದ್ರಾಕ್ಷಿ, 250 ಕೆ.ಜಿ ಬಾದಾಮಿ, 1 ಸಾವಿರ ಕೆ.ಜಿ ಡೈಮಂಡ್ ಸಕ್ಕರೆ, 2 ಸಾವಿರ ಕೆ.ಜಿ ಬೂರಾ ಸಕ್ಕರೆ, 50 ಕೆ.ಜಿ ಪಿಸ್ತಾ, 50 ಕೆ.ಜಿ ಏಲಕ್ಕಿ, 50 ಕೆ.ಜಿ ಜಾಕಾಯಿ ಮತ್ತು ಜಾಪತ್ರೆ, 50 ಕೆ.ಜಿ ಪಚ್ಚೆ ಕರ್ಪೂರ, 200 ಕೆ.ಜಿ ಲವಂಗಗಳನ್ನು ಬಳಸಿ ತಯಾರಿಸಲಾಗಿದೆ ಎಂದು ತಿಳಿಸಿದರು.

ಗೋಷ್ಠಿಯಲ್ಲಿ ಡಾ.ರಾಜ್‌ಕುಮಾರ್ ಪುತ್ರಿ ಲಕ್ಷ್ಮೀ, ಅಳಿಯ ಗೋವಿಂದರಾಜು, ದೇವಸ್ಥಾನದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಸೇರಿ ಹಲವರು ಇದ್ದರು.

# ನಾಳೆ ವಿಪ್ರ ಯುವ ಟ್ರಸ್ಟ್‌ನಿಂದ ಹನುಮ ಜಯಂತಿ ಮಹೋತ್ಸವ

ರಾಮನಗರ :ರಾಮನಗರ ತಾಲ್ಲೂಕು ವಿಪ್ರ ಯುವ ಸೇವಾ ಟ್ರಸ್ಟ್‌ನಿಂದ 13ನೇ ವರ್ಷದ ಹನುಮ ಜಯಂತಿ ಹಾಗೂ 20ನೇ ವರ್ಷದ ವಾರ್ಷಿಕೋತ್ಸವ ಸಮಾರಂಭವನ್ನು ಅದ್ದೂರಿ ಹಾಗೂ ಭಕ್ತಿ ಪೂರ್ವಕವಾಗಿ ಆಚರಿಸಲು ನಿರ್ಧರಿಸಲಾಗಿದೆ ಎಂದು ವಿಪ್ರ ಯುವ ಸೇವಾ ಟ್ರಸ್ಟ್ ಅಧ್ಯಕ್ಷ ಟಿ.ಕೇಶವವೈದ್ಯ ತಿಳಿಸಿದರು.

ಹನುಮ ಜಯಂತಿ ಹಾಗೂ ವಾರ್ಷಿಕೋತ್ಸವ ಸಂಬಂಧ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಪ್ರತಿ ವರ್ಷದಂತೆ ಈ ಬಾರಿಯೂ ಶ್ರದ್ಧಾ ಭಕ್ತಿಯ ಜತೆಗೆ ವಿಜೃಂಭಣೆಯಿಂದ ಜಯಂತಿ ಆಚರಿಸಲಾಗುತ್ತದೆ. ಡಿ.27ರ ಶನಿವಾರ ವಾರ್ಷಿಕೋತ್ಸವ ಸಂಬಂಧ ಶ್ರೀರಾಮ ಮಂದಿರದಲ್ಲಿ ಭಕ್ತಿಗೀತೆ, ಸಂಗೀತ ಗಾಯನ, ನೃತ್ಯ, ಭಜನೆ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಆಯೋಜಿಸಲಾಗಿದೆ. ಜತೆಗೆ ವಿಪ್ರ ಯುವ ಸೇವಾ ಟ್ರಸ್ಟ್‌ನ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮ ಜರುಗಲಿದೆ ಎಂದರು.

ಡಿ.28ರ ಪ್ರಾತಃಕಾಲದಿಂದ ವಿವಿಧ ಪೂಜಾ ಕಾರ್ಯ ನಡೆಯಲಿದ್ದು, ಮುಂಜಾನೆ 5ಗಂಟೆಗೆ ಆಂಜನೇಯ ಸ್ವಾಮಿಗೆ ಪಂಚಾಮೃತ ಅಭಿಷೇಕದೊಂದಿಗೆ ಹನುಮ ಜಯಂತೋತ್ಸವ ಆರಂಭವಾಗಲಿದೆ. ಬಳಿಕ ಶ್ರೀರಾಮ ದೇವರಿಗೆ ಪಂಚಾಮೃತ ಅಭಿಷೇಕ, ನಂತರ ಪವಮಾನ ಹೋಮ, ಪೂರ್ಣಹುತಿ ಜರುಗಲಿದೆ. ಡಿ.28ರ ಬೆಳಗ್ಗೆ 9:30ಕ್ಕೆ ಶ್ರೀ ಅಭಯ ಆಂಜನೇಯ ಸ್ವಾಮಿ, ಶ್ರೀರಾಮ, ಶ್ರೀ ಶ್ರೀನಿವಾಸ ದೇವರ ಉತ್ಸವ ಮೂರ್ತಿಗಳ ಮೆರವಣಿಗೆ ನಗರದ ಪ್ರಮುಖ ಬೀದಿಗಳಲ್ಲಿ ನಡೆಯಲಿದ್ದು, ಬಳಿಕ ಮಹಾಮಂಗಳಾರತಿ, ಪ್ರಸಾದ ವಿನಿಯೋಗ ಹಮ್ಮಿಕೊಳ್ಳಲಾಗಿದೆ. ವಿಪ್ರ ಸಮಾಜದ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು. ಈ ಸಂದರ್ಭದಲ್ಲಿ ವಿಪ್ರ ಯುವ ಸೇವಾ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಬಿ.ಆರ್.ಉಮೇಶ್ ಶಾಸ್ತ್ರಿ, ಖಜಾಂಚಿ ಕೆ.ಆರ್. ವಿಜಯಕುಮಾರ್, ಟ್ರಸ್ಟ್‌ನ ಸದಸ್ಯರಾದ ಪಿ.ವೈ.ರವೀಂದ್ರ ಹೇರ್ಳೆ, ಬಾಲಸುಬ್ರಹ್ಮಣ್ಯ ಅಯ್ಯರ್, ಚಂದ್ರಶೇಖರ್, ಮಹೇಶ್, ವಿಶ್ವನಾಥ, ಶ್ರೀನಿವಾಸ ರಾವ್ ಸೇರಿದಂತೆ ಹಲವರು ಇದ್ದರು.

# ಚಾಮರಾಜನಗರ ಜಿಲ್ಲೆಯಿಂದ ರೌಡಿ ಮಾಧೂರಾಮ್ ಗಡಿಪಾರು

ಗುಂಡ್ಲುಪೇಟೆ: ತೆರಕಣಾಂಬಿ ಪೊಲೀಸ್ ಠಾಣಾ ವ್ಯಾಪ್ತಿಯ ರೌಡಿ ಮಾಧೂರಾಮ್ ಎಂಬಾತನನ್ನು ಚಾಮರಾಜನಗರ ಜಿಲ್ಲಾ ವ್ಯಾಪ್ತಿಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಪೊಲೀಸ್ ಠಾಣಾ ವ್ಯಾಪ್ತಿಗೆ ಗಡಿಪಾರು ಮಾಡಿ ಕೊಳ್ಳೇಗಾಲ ಉಪ–ವಿಭಾಗಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

ಈತನ ಮೇಲೆ ತೆರಕಣಾಂಬಿ ಪೊಲೀಸ್ ಠಾಣೆಯಲ್ಲಿ 4 ಪ್ರಕರಣಗಳು ಹಾಗೂ ಚಾಮರಾಜನಗರ ಗ್ರಾಮಾಂತರ ಪೊಲೀಸ್ ಠಾಣೆ ಮತ್ತು ಪಟ್ಟಣ ಠಾಣೆಯಲ್ಲಿ ತಲಾ ಒಂದೊಂದು ಪ್ರಕರಣಗಳು ದಾಖಲಾಗಿವೆ. ಕಾನೂನು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಸದರಿ ವ್ಯಕ್ತಿಯನ್ನು ಡಿ.24ರಿಂದ 06 ತಿಂಗಳವರೆಗೆ ಗಡಿಪಾರು ಮಾಡಲಾಗಿದೆ ಎಂಬ ಮಾಹಿತಿ ಪೊಲೀಸ್ ಇಲಾಖೆಯಿಂದ ಲಭ್ಯವಾಗಿದ್ದು, ಈ ಆದೇಶದ ಮೇರೆಗೆ ಡಿ.27 ರಂದು ತೆರಕಣಾಂಬಿ ಪೊಲೀಸರು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಹಾಜರುಪಡಿಸಿರುತ್ತಾರೆ ಎಂದು ಪೊಲೀಸ್ ಇಲಾಖೆ ತಿಳಿಸಿದೆ.

# ವಾರದೊಳಗೆ ಕ್ರಮಕೈಗೊಳ್ಳದಿದ್ದರೆ ಹೋರಾಟ

## ಎಸ್ಪಿ ಸೇರಿದಂತೆ ಅವರ ತಂಡವನ್ನು ಅಮಾನತು ಪಡಿಸುವಂತೆ ಒತ್ತಾಯಿಸಿ ಸಿಎಂಗೆ, ವಾಲ್ಮೀಕಿ ಶ್ರೀಗಳ ನೇತೃತ್ವದಲ್ಲಿ ಮನವಿ ಸಲ್ಲಿಕೆ

ಚಾಮರಾಜನಗರ, ನಾಯಕ ಜನಾಂಗದ ಹೆಸರಿಗೆ ಕಳಂಕ ತರುವ ರೀತಿಯಲ್ಲಿ ಹಾಗೂ ಕೋಮುಸಾಮರಸ್ಯವನ್ನು ಹಾಳುಮಾಡುವ ರೀತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಅವರ ತಂಡವನ್ನು ಈ ಕೂಡಲೇ ಅಮಾನತ್ತು ಪಡಿಸಬೇಕು ಎಂದು ಒತ್ತಾಯಿಸಿ ಜಿಲ್ಲಾ ನಾಯಕ ಜನಾಂಗದ ಹೋರಾಟ ಸಮಿತಿಯು ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿಗಳ ನೇತೃತ್ವದಲ್ಲಿ ನಗರದ ಜಿಲ್ಲಾಡಳಿತ ಭವನದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ ಮಾತನಾಡಿ, ನಾಯಕ ಸಮುದಾಯ ತನ್ನದೆಯಾದ ಒಂದು ಇತಿಹಾಸ ಹೊಂದಿರುವ ಸಮುದಾಯವಾಗಿದ್ದು ಈ ಸಮುದಾಯದ ಕಿಡಿಗೇಡಿಗಳು ಕಳಂಕ ತರುವ ಕೆಲಸವನ್ನು ಮಾಡುತ್ತಿದ್ದಾರೆ. ತಪ್ಪಿಸ್ಥತ ಅಧಿಕಾರಿಗಳ ಮೇಲೆ ಒಂದು ವಾರದೊಳಗೆ ಕಾನೂನು ಕ್ರಮಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಚಾಮರಾಜನಗರ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಇತ್ತೀಚೆಗೆ ಕೋಮುಸೌಹಾರ್ದತೆಯನ್ನು ಹಾಳುಮಾಡುವ ಕೆಲವು ಘಟನೆಗಳನ್ನು ಕಿಡಿಗೇಡಿಗಳು ಅವ್ಯಹಿತವಾಗಿ ನಡೆಸಿಕೊಂಡು ಬರುತ್ತಿದ್ದು, ಇವರ ಈ ಕೃತ್ಯಕ್ಕೆ ಸಹಾಯವಾಗುವ ರೀತಿಯಲ್ಲಿ ಚಾಮರಾಜನಗರ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಗಳು ಮತ್ತು ಅವರ ತಂಡದ ಇತರೆ ಪೊಲೀಸ್‌ನವರು ಕರ್ತವ್ಯ ನಿರ್ವಹಿಸಿದ್ದಾರೆ ಎಂದು ಆರೋಪಿಸಿದರು.




ಚಾಮರಾಜನಗರ ತಾಲ್ಲೂಕು ಜ್ಯೋತಿಗೌಡನಪುರ ಗ್ರಾಮದಲ್ಲಿ ಬುದ್ಧ ಪ್ರತಿಮೆ ಹಾಗೂ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ನಾಮಫಲಕವನ್ನು ಧ್ವಂಸಗೊಳಿಸಿದ್ದು, ಈ ಘಟನೆಯಲ್ಲಿ ನೈಜ ಅಪರಾಧಿಗಳನ್ನು ಬಂಧಿಸದೇ ನಾಯಕ ಜನಾಂಗದ ಮೇಲೆ ದುರುದ್ದೇಶದಿಂದ ನಿರಪರಾಧಿಯನ್ನು ಬಂಧಿಸಿದ್ದು, ಬಂಧಿಸಿರುವ ವ್ಯಕ್ತಿಯ ಮೇಲೆ ಆಧಾರಗಳನ್ನು ಸೃಷ್ಟಿ ಮಾಡುವ ಸಲುವಾಗಿ ಅವನ ಸ್ನೇಹಿತನನ್ನು ಠಾಣೆಗೆ ಕರೆಯಿಸಿ, ದೈಹಿಕವಾಗಿ ಹಾಗೂ ಮಾನಸಿಕವಾಗಿ ಹಲ್ಲೆ ಮಾಡಿರುವುದು ಸರಿಯಲ್ಲ ಎಂದು ಹೇಳಿದರು.

ಎಲ್ಲಾ ವಿಚಾರಣೆಗಳನ್ನು ಸ್ಥಳೀಯ ಪೊಲೀಸ್ ಅಧಿಕಾರಿಗಳಿಂದ ವಾಪಸ್ ಪಡೆದು,

ಒಂದು ವಿಶೇಷ ತನಿಖಾ ತಂಡ ವನ್ನು ಅಥವಾ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ನ್ಯಾಯಾಧೀಶರ ಮುಖಾಂತರ ವಿಚಾರಣೆ ನಡೆಸಬೇಕು ಎಂದು ಒತ್ತಾಯಿಸಿದರು.

ಚಾಮರಾಜನಗರ ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತ,ಮತ್ತು ಅವರ ತಂಡದ ಸದಸ್ಯರುಗಳಾದ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀಕಾಂತ್, ಸಾಗರ್, ನವೀನ್ ಹಾಗೂ ಎ.ಎಸ್.ಐ. ಮಹದೇವು ಅವರುಗಳನ್ನು ಸೇವೆಯಿಂದ ಅಮಾನತ್ತುಗೊಳಿಸಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ,ತಾಲೂಕು ವಿದ್ಯಾಭಿವೃದ್ಧಿ ಸಂಘದ ಉಪಾಧ್ಯಕ್ಷ ಪು.ಶ್ರೀನಿವಾಸನಾಯಕ,

ಜಿಲ್ಲಾ ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ಹೆಚ್.ವಿ.ಚಂದ್ರು, ಜಿ.ಪಂ.ಮಾಜಿ ಸದಸ್ಯರಾದ ಎಸ್.ಸೋಮನಾಯಕ, ಕೊಪ್ಪಾಳಿ ಮಹದೇವನಾಯಕ, ಬಿಜೆಪಿ ಮಾಜಿ ಅಧ್ಯಕ್ಷ ಆರ್.ಸುಂದರ್, ಬಿಜೆಪಿ ಎಸ್ ಟಿ ಮೋರ್ಚಾದ ರಾಜ್ಯ ಕಾರ್ಯದರ್ಶಿ ಜಯಸುಂದರ್, ನಗರಸಭಾ ಮಾಜಿ ಅಧ್ಯಕ್ಷ ರಾಮಸಮುದ್ರ ಸುರೇಶ್, ಕಪಿನಿನಾಯಕ, ಯಳಂದೂರು ತಾಲ್ಲೂಕು ಅಧ್ಯಕ್ಷ ಮುರುಳಿಕೃಷ್ಣ, ಜಿ.ಪಂ.ಮಾಜಿ ಸದಸ್ಯರಾದ ಎಸ್.ಸೋಮನಾಯಕ, ಕೊಪ್ಪಾಳಿ ಮಹದೇವನಾಯಕ ಸೇರಿದಂತೆ ಇತರರು ಹಾಜರಿದ್ದರು.

# ಭವನ ಕಾಮಗಾರಿಗೆ ಚಾಲನೆ



ಕೊಳ್ಳೇಗಾಲ. ಪಟ್ಟಣದ ಬಸ್ತೀಪುರ ಬಡಾವಣೆಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಸಮುದಾಯ ಭವನವನ್ನು 20 ಲಕ್ಷ ವೆಚ್ಚದಲ್ಲಿ ಮುಂದುವರೆದ ಕಾಮಗಾರಿಯನ್ನು ಶಾಸಕ ಎ.ಆರ್.ಕೃಷ್ಣಮೂರ್ತಿ ಅವರು ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಸರ್ಕಾರ ನನಗೆ ನೀಡಿದ್ದ ಅನುದಾನದಲ್ಲಿ ಎಲ್ಲಾ ಧರ್ಮದ, ಎಲ್ಲಾ ವರ್ಗದ ಜನರ ಸಮುದಾಯ ಭವನ ಪೂರ್ಣಗೊಳಿಸಲು ನೀಡಲಾಗಿದೆ. ಆದ್ದರಿಂದ ನನ್ನ ಅವಧಿಯಲ್ಲೇ ಈ ಅಂಬೇಡ್ಕರ್ ಭವನವನ್ನು ಶ್ರೀಘ್ರದಲ್ಲಿ ಪೂರ್ಣಗೊಳಿಸಿ ಸಮುದಾಯದ ಜನರ ಬಳಕೆಗೆ ಅನುವು ಮಾಡಿಕೊಡುವಂತೆ ಸಂಬಂಧ ಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.ಬಸ್ತೀಪುರ ಗ್ರಾಮದ ಯಜಮಾನರು ಶಿವಕುಮಾರ್, ರಾಜಪ್ಪ, ಎಸ್.ಮಾದೇಶ್, ನಾಗರಾಜು(ನಾಣಿ), ಮಹೇಶ್, ಮಾದೇವ, ಎಸ್.ಸಿದ್ದರಾಜು, ಎಂ.ಸಿದ್ದರಾಜು, ಅಂಥೋಣಿ, ಮುಖಂಡರು ರವಿ,ಮಲ್ಲಿಕಾರ್ಜುನ, ಎಂ.ಪ್ರಸನ್ನ, ಶಿವಮಲ್ಲು, ಅಶೋಕ,ನಗರಸಭೆ ನಾಮನಿರ್ದೇಶಿತ ಸದಸ್ಯರು ಸ್ವಾಮಿ ನಂಜಪ್ಪ, ಮಾಜಿ ಸದಸ್ಯ ಶಾಂತರಾಜು ಹಾಗೂ ಗ್ರಾಮಸ್ಥರು ಹಾಜರಿದ್ದರು.

# ವಿಶ್ವಕರ್ಮ ಯುವ ಜಾಗೃತಿ ದಿನದರ್ಶಿಕೆ ಬಿಡುಗಡೆ

ಮೈಸೂರು: ವಿಶ್ವಕರ್ಮ ಯುವ ಜಾಗೃತಿ ವೇದಿಕೆ ವತಿಯಿಂದ ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಸಾಧಕರಿಗೆ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವೇದಿಕೆ ಅಧ್ಯಕ್ಷ ಕೆಂಡಗಣ್ಣಸ್ವಾಮಿ ಮಾತನಾಡಿ, ಸಮುದಾಯವು ಆರ್ಥಿಕ, ಶೈಕ್ಷಣಿಕ, ಸಾಮಾಜಿಕವಾಗಿ ಹಿಂದುಳಿದಿದ್ದು, ಸರ್ಕಾರ ಇವರನ್ನು ಮೇಲೆತ್ತಲು ಅಗತ್ಯ ಕ್ರಮ ಕೈಗೊಳ್ಳಬೇಕಾಗಿದೆ ಎಂದು ಮನವಿ ಮಾಡಿದರು. ಉದ್ಯಮಿ ನಾರಾಯಣ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಎಲ್.ಸತೀಶ್, ಸಿದ್ದರಾಜು, ಮಂಜು, ಮಹಂತೇಶ್, ಸಿದ್ದೇಶ್, ನಾಗರಾಜು, ಮೂರ್ತಿ, ಲೋಕೇಶ್ ಇದ್ದರು.



# ಸಾರಿಗೆ ನೌಕರರ ದಿನದರ್ಶಿಕೆ ಬಿಡುಗಡೆ

ಮೈಸೂರು: ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮೈಸೂರು ವಿಭಾಗದ ನಗರ ಮತ್ತು ಗ್ರಾಮಾಂತರ ಘಟಕ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ನೌಕರರ ಸಂಘ ಹಾಗೂ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಹೊರ ತಂದಿರುವ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಚಿತ್ರ, ಸಂದೇಶವುಳ್ಳ ನೂತನ ವರ್ಷದ ಕ್ಯಾಲೆಂಡರನ್ನು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಗಣ್ಯರು ಬಿಡುಗಡೆಗೊಳಿಸಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಇತಿಹಾಸ ಮರುಕಳಿಸುವಂತೆ ಮಾಡಲು ಹಾಗೂ ನಮ್ಮ ತಪ್ಪನ್ನು ತಿದ್ದಿಕೊಳ್ಳುವ ನಿಟ್ಟಿನಲ್ಲಿ ಚರಿತ್ರೆಕಾರರ ನೆನಪು ಅಗತ್ಯವಾಗಿದೆ. ಹೀಗಾಗಿ ಈ ಕ್ಯಾಲೆಂಡರ್‌ನಲ್ಲಿ ಬಸವಣ್ಣ, ಜ್ಯೋತಿಭಾಪುಲೆ, ನಾಲ್ವಡಿ ಅವರ ಸಂದೇಶಗಳೂ ಇವೆ. ಸಮ ಸಮಾಜ ಕಟ್ಟುವ ನಿಟ್ಟಿನಲ್ಲಿ ಅಂಬೇಡ್ಕರ್ ಸಾಕಷ್ಟು ಕೆಲಸ ಮಾಡಿದರು. ಅವರು ಕೇವಲ ಭಾರತಕ್ಕೆ ಮಾತ್ರ ಸೀಮಿತರಲ್ಲ, ಇಡೀ ವಿಶ್ವವೇ ಅವರನ್ನು ಅಪ್ಪಿಕೊಳ್ಳು ತ್ತಿದೆ. ಕ್ಯಾಲೆಂಡರ್‌ಗೆ ಮಾತ್ರ ಸೀಮಿತರಾಗದೇ ಅವರ ಪುತ್ಥಳಿ, ಭಾಷಣ, ಆಡಿದ ಮಾತುಗಳು ವಿಶ್ವ ವ್ಯಾಪಿಯಾಗುತ್ತಿರುವುದು ಇದಕ್ಕೆ ಸಾಕ್ಷಿಯಾಗಿದೆ ಎಂದರು. ಇಡೀ ಸಮಾಜಕ್ಕೆ ಮಾನವೀಯತೆ ಅಗತ್ಯ ವಾಗಿದೆ. ಹೀಗಾಗಿ ಈ ಕ್ಯಾಲೆಂಡರ್‌ನಲ್ಲಿ ಮುದ್ರಿಸಿರುವ ಸಂದೇಶಗಳು ಪ್ರಸ್ತುತವಾಗಿವೆ. ದಲಿತ ಯುವಕನನ್ನು ವಿವಾಹವಾದಳು ಎಂಬ ಕಾರಣಕ್ಕೆ ಲಿಂಗಾಯತ ಸಮುದಾಯದ ಕುಟುಂಬವೊಂದು ಗರ್ಭಿಣಿ ಪುತ್ರಿಯನ್ನೇ ಮರ್ಯಾದಾ ಹತ್ಯೆ ಮಾಡಿದ ಘಟನೆಗಳೂ ನಡೆಯುತ್ತಿವೆ. ಹೀಗಾಗಿ ಇಂತಹ ಸಂದೇಶಗಳು ಹೆಚ್ಚು ಪ್ರಚುರ ಪಡೆಯಬೇಕಾದ ಅಗತ್ಯವಿದೆ. ಪ್ರಧಾನಿ ನರೇಂದ್ರ ಮೋದಿ ಕ್ರಿಸ್‌ಮಸ್ ಸಂದರ್ಭದಲ್ಲಿ ಚರ್ಚಿಗೆ ಹೋಗುತ್ತಾರೆ. ಆದರೆ ಹಿಂದೂ ಧರ್ಮ ಎಂದು ಹೇಳಿಕೊಂಡು ಚರ್ಚ್ ಮೇಲೆ ದಾಳಿ ನಡೆದಾಗ ಎಲ್ಲರೂ ಸುಮ್ಮನಿರುವುದು ಬೇಸರದ ಸಂಗತಿ ಎಂದರು. ಸಾರಿಗೆ ಇಲಾಖೆ ಅಧಿಕಾರಿಗಳಾದ ಶ್ರೀನಿವಾಸ್, ವೀರೇಶ್, ಎಂ.ಕೆ. ರೇವಣ್ಣ, ರಶ್ಮಿ, ದಿನೇಶ್, ಹೇಮಂತ್‌ಕುಮಾರ್ ಇನ್ನಿತರರು ಇದ್ದರು.



# ಹನುಮ ಜಯಂತಿ ಶೋಭಯಾತ್ರೆ



ಗುಂಡ್ಲುಪೇಟೆ: ಪಟ್ಟಣದಲ್ಲಿ ಮೊದಲ ಬಾರಿಗೆ ಅದ್ದೂರಿಯಾಗಿ ಹನುಮ ಜಯಂತಿ ಅಚರಣೆ ಮಾಡಲಾಯಿತು, ಹಳೆ ಪ್ರವಾಸಿ ಮಂದಿರ ದಿಂದ ಚಾಮರಾಜನಗರ ರಸ್ತೆಯಲ್ಲಿರುವ ಆಂಜನೇಯ ದೇವಸ್ಥಾನದಿಂದ ಹನುಮ ಜಯಂತಿ ಮೆರವಣಿಗೆ ಮಾಜಿ ಶಾಸಕ ಸಿ ಎಸ್ ನಿರಂಜನ್ ಕುಮಾರ್ ಮತ್ತು ಪುರಸಭೆ ಮಾಜಿ ಅಧ್ಯಕ್ಷ ಪಿ ಗಿರೀಶ್ ಮೆರವಣಿಗೆಗೆ ಚಾಲನೆ ನೀಡಿದರು.

ಪಟ್ಟಣದ ಕೋಡಹಳ್ಳಿ ಸರ್ಕಲ್ ಮಾರ್ಗವಾಗಿ ಕೆಆರ್ ಸಿ ರಸ್ತೆಯ ಮೂಲಕ ಹಳೆ ಬಸ್ ನಿಲ್ದಾಣದ ಮಾರ್ಗವಾಗಿ ಮೆರವಣಿಗೆ ನಡೆಯಿತು, ವಿವಿಧ ಕಲಾ ತಂಡಗಳು, ಬೃಹತ್ ಹನುಮ ಟ್ಯಾಬ್ಲೊ ಹಾಗೂ ಹನುಮ ವಿಗ್ರಹಳ ಮೆರವಣಿಗೆ ಸಾಗಿಬಂತು, ಡಿಜೆ ಶಬ್ದಕ್ಕೆ ಯುವಕರು ಕುಣಿದು ಕುಪ್ಪಳಿಸಿದರು. ಈ ಸಂದರ್ಭದಲ್ಲಿ ಹನುಮ ಜಯಂತಿ ಕಾರ್ಯಕ್ರಮಕ್ಕೆ ಆಗಮಿಸಿದ ಸಾವಿರಾರು ಸಂಖ್ಯೆಯ ಜನರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು, ಪಟ್ಟಣದ ರಾಷ್ಟ್ರೀಯ ಹೆದ್ದಾರಿ, ಹಳೆ ಬಸ್ ನಿಲ್ದಾಣ ಚಾಮರಾಜನಗರ ಜೋಡಿ ರಸ್ತೆ ಯಲ್ಲಿ ಫ್ಲೆಕ್ಸ್, ಬಂಟಿಂಗ್ಸ್, ರಾರಾಜಿಸಿದವು.

# ಕೆಂಪೇಗೌಡ ಜಯಂತಿಗೆ ಡಿಕೆಶಿಗೆ ಆಹ್ವಾನ

ಹಾಸನ: ಮಾಜಿ ಶಾಸಕ ಹೆಚ್.ಎಂ.ವಿಶ್ವನಾಥ್ ಅವರು ಬೆಂಗಳೂರಿನಲ್ಲಿ ಶನಿವಾರ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾಗಿ ಫೆ.2 ರಂದು ಸಕಲೇಶಪುರ ಪಟ್ಟಣದಲ್ಲಿ ನಡೆಯುವ ನಾಡಪ್ರಭು ಕೆಂಪೇಗೌಡ ಜಯಂತಿಯಲ್ಲಿ ಭಾಗವಹಿಸುವಂತೆ ಕೋರಿದರು.

ಆಹ್ವಾನ ಸ್ವಾಗತಿಸಿದ ಡಿ.ಕೆ.ಶಿವಕುಮಾರ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸುವುದಾಗಿ ಅವರು ಭರವಸೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಹೆಚ್.ಎಂ.ವಿಶ್ವನಾಥ್ ಅವರು, ಮಲೆನಾಡು ಭಾಗದಲ್ಲಿ ಕಾಡುತ್ತಿರುವ ಕಾಡಾನೆಗಳ ಸಮಸ್ಯೆ ನಿವಾರಣೆಗೆ ಶ್ರೀಲಂಕಾ ಮಾದರಿಯಲ್ಲಿ ಆನೆಧಾಮ ನಿರ್ಮಾಣಕ್ಕೆ ಮುಂದಾಗ ಬೇಕೆಂದು ಕೋರಿದರು. ಈ ವಿಚಾರದ ಬಗ್ಗೆ ಸಕಾರತಕವಾಗಿ ಸ್ಪಂದಿಸಿದ ಉಪ ಮುಖ್ಯಮಂತ್ರಿ, ಅಂದು ಕಾಡಾನೆ ಸಮಸ್ಯೆ, ಆನೆಧಾಮ ನಿರ್ಮಾಣದ ಬಗ್ಗೆ ಚರ್ಚಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ವಿಶ್ವನಾಥ್ ಅವರು ತಿಳಿಸಿದ್ದಾರೆ. ಸಕಲೇಶಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೈರಮುಡಿ ಚಂದ್ರು ಮತ್ತಿತರರು ಹಾಜರಿದ್ದರು.



## ಹಸಗೂಲಿ ಗ್ರಾಮದಲ್ಲಿ ಆಯೋಜನೆ

# ಹೆಣ್ಣು ಕರುಗಳ ಪ್ರದರ್ಶನಕ್ಕೆ ಶಾಸಕ ಗಣೇಶ್ ಪ್ರಸಾದ್ ಚಾಲನೆ

ಗುಂಡ್ಲುಪೇಟೆ: ಕರ್ನಾಟಕ ಸರ್ಕಾರ ಹಾಲು ಉತ್ಪಾದಕ ಮಹಾ ಮಂಡಳಿ ಬೆಂಗಳೂರು ಹಾಗೂ ಜಿಲ್ಲಾ ಸಹಕಾರಿ ಹಾಲು ಉತ್ಪಾದಕ ಸಂಘಗಳ ಒಕ್ಕೂಟ ಕುದೇರು ಮತ್ತ ಹಸಗೂಲಿ ಹಾಲು ಉತ್ಪಾದಕ ಸಹಕಾರ ಸಂಘಗಳ ಸಹಯೋಗದಲ್ಲಿ " ಹೆಣ್ಣು ಕರುಗಳ ಪ್ರದರ್ಶನ ಕಾರ್ಯಕ್ರಮವನ್ನು ಹಸಗೂಲಿ ಗ್ರಾಮದಲ್ಲಿ ಆಯೋಜಿಸಲಾಗಿತ್ತು ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಹೆಣ್ಣು ಕರುಗಳ ಮಿಶ್ರತಳಿ, ಮತ್ತು ನಾಟಿ ರಾಸುಗಳ ಕರುಗಳನ್ನು ಪಾಲನೆ, ಪೋಷಣೆ ಮಾಡುವ ಉದ್ದೇಶದಿಂದ ಕರುಗಳ ಸಾಕಾಣಿಕೆಗೆ ಉತ್ತೇಜನ ನೀಡಲು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಹೆಣ್ಣು ಕರುಗಳ ಪ್ರದರ್ಶನದಲ್ಲಿ 150 ಹೆಣ್ಣು ಕರುಗಳು ಭಾಗಿಯಾಗಿದ್ದು 12 ಕರುಗಳನ್ನು ಉತ್ತಮವಾಗಿ ಪೋಷಣೆ ಮಾಡಿರುವ ವರಿಗೆ ನಗದು ಬಹುಮಾನ ಮತ್ತು ಪ್ರಶಸ್ತಿ ನೀಡಲಾಯಿತು, ಉಳಿದ ಎಲ್ಲರಿಗೂ ಪ್ರಮಾಣ ಪತ್ರ ವಿತರಣೆ ಮಾಡಲಾಯಿತು, ಜೊತೆಗೆ ಕರು ಸಾಕಾಣಿಕೆ ಕಿಟ್ ನೀಡಲಾಯಿತು.



ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ಮಾತನಾಡಿ ರಾಸುಗಳ ಪ್ರದರ್ಶನ ಮುಂದಿನ ದಿನಗಳಲ್ಲಿ ಹೆಚ್ಚಿನ ಮಟ್ಟದಲ್ಲಿ ನಡೆಯಲಿ ಅದಕ್ಕೆ ಎಲ್ಲಾ ರೀತಿಯ ಸಹಕಾರ ನೀಡಲಾಗುವುದು, ಸರ್ಕಾರದಿಂದ ಸಾಕಷ್ಟು ಸೌಲಭ್ಯ ಗಳಿವೆ ಅದನ್ನು ಬಳಸಿಕೊಳ್ಳಬೇಕು ಎಂದರು ಹಾಗೂ ಜಿಲ್ಲೆಯ ಹಾಲು ಉತ್ಪಾದಕ ರೈತ ರಿಗೆ ಅನುಕೂಲವಾಗಲೆಂದು ನಮ್ಮ ಜಿಲ್ಲೆಯಲ್ಲಿಯೇ ಚಾಮುಲ್ ತೆರೆಯಲಾಗಿದ್ದು, ಚಾಮುಲ್ ಅಭಿವೃದ್ಧಿಗೆ 50 ಕೋಟಿ ಅನುದಾನ ಬೇಕು ಎಂದು ಚಾಮುಲ್‌ನಿಂದ ಮನವಿ ಮಾಡಿದ್ದು ಇದಕ್ಕೆ ಮುಖ್ಯಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದರು.

ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ ಮಾತನಾಡಿ ಹಾಲು ಉತ್ಪಾದಕರು ಹಾಲು ಉತ್ಪಾದನೆ ಮಾಡುವುದೇ ದೊಡ್ಡ ಕೆಲಸವಲ್ಲ ಹೆಣ್ಣು ಕರುಗಳನ್ನು ಉತ್ತಮವಾಗಿ ಸಾಕಿದಾಗ ಮುಂದಿನ ದಿನಗಳಲ್ಲಿ ನಿಮಗೆ ಅದು ಆದಾಯಕ್ಕೆ ಮೂಲವಾಗುತ್ತದೆ ಜೊತೆಗೆ ಮೊದಲಿನಿಂದಲೂ ಕರುಗಳ ಲಾಲನೆ ಪಾಲನೆ ಮಾಡಿದಾಗ ಅದು ಬೆಳೆದು ದೊಡ್ಡದಾಗ ಹೆಚ್ಚು ಹಾಲು ಕೊಡುತ್ತದೆ ರೈತರಿಗೆ ಅದಾಯದ ಮೂಲವಾಗುತ್ತದೆ ಆದ್ದರಿಂದ ಅಗಾಗಿ ಹೆಣ್ಣು ಕರುಗಳ ಪೋಷಣೆ ಮಾಡುವಂತೆ ಸಲಹೆ ನಿಡಿದರು.

ಈ ಸಂದರ್ಭದಲ್ಲಿ ಶಾಸಕ ಎಚ್ ಎಂ ಗಣೇಶ್ ಪ್ರಸಾದ್, ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಹಾಗೂ ಚಾಮುಲ್ ನಿರ್ದೇಶಕ ನಂಜುಂಡಪ್ರಸಾದ್, ಚಾಮುಲ್ ನಿರ್ದೇಶಕ ಎಂ,ಪಿ ಸುನೀಲ್, ಚಾಮುಲ್ ವ್ಯವಸ್ಥಾಪಕ ನಿರ್ದೇಶಕ ರಾಜಕುಮಾರ್, ವ್ಯವಸ್ಥಾಪಕ ಶರತ್ ಕುಮಾರ್, ತಾಲ್ಲೂಕು ಮೇಲ್ವಿಚಾರಕ ಪ್ರಕಾಶ್, ಹಸಗೂಲಿ ಡೈರಿ ಅಧ್ಯಕ್ಷ ನಾಗರಾಜು,ಪಶು ವೈದ್ಯರಾದ ಡಾ ಅಮರ್, ಡಾ.ಮಂಜು, ಡಾ,ರವಿ,ಡಾ ಪ್ರಕಾಶ್, ಮತ್ತಿತರರಿದ್ದರು.



# ಶಿವನೊಲುಮೆ ಗಳಿಸಿದ ಧೂಪದ ಗೊಗ್ಗವ್ವೆ

## ಉಪೇಕ್ಷಿತ ವಚನಕಾರರು

ಕಾಯಕದಿಂದಲೇ ತಮ್ಮನ್ನು ತಾವು ಗುರುತಿಸಿಕೊಂಡ ಶಿವಶರಣರ ಸಾಲಿನಲ್ಲಿ ಮತ್ತೊಂದು ಮುಖ್ಯ ಹೆಸರು ಧೂಪದ ಕಾಯಕವನ್ನು ಮಾಡುತ್ತಿದ್ದ ಗೊಗ್ಗವ್ವೆ.

ವಚನಯುಗವು ಮಹಿಳೆಯರ ಅಂತರಂಗದಲ್ಲಿ ನವ ಜಾಗೃತಿಯ ಅರಿವನ್ನು ಮೂಡಿಸಿ ಮೇಲು–ಕೀಳು ಎಂಬ ವ್ಯತ್ಯಾಸವಿಲ್ಲದೆ ಎಲ್ಲ ವರ್ಗದ ಮಹಿಳೆಯರಿಗೂ ಅಕ್ಷರಾಭ್ಯಾಸ ಕಲಿಸಿ ವಚನ ರಚನೆ ಮಾಡುವ ಅವಕಾಶ ಕಲ್ಪಿಸಿಕೊಟ್ಟಿತು. ಕೆಲವು ಶರಣೆಯರು ತಮ್ಮ ಗಂಡನ ಹೆಸರನ್ನು ವಚನದ ಅಂಕಿತವಾಗಿಟ್ಟುಕೊಂಡರೆ ಮತ್ತೆ ಕೆಲವರು ತಮ್ಮ ಇಷ್ಟ ದೈವವನ್ನು ವಚನದ ಅಂಕಿತವಾಗಿ ಇಟ್ಟುಕೊಂಡು ವಚನಗಳ ರಚನೆ ಮಾಡಿದರು.

ಶತಶತಮಾನಗಳಿಂದಲೂ ಸಮಾಜದಲ್ಲಿ ಹೆಣ್ಣಿನ ಬಗ್ಗೆ ಇದ್ದ ಪೂರ್ವಾಗ್ರಹ ಪೀಡಿತ ದೃಷ್ಟಿದೋಷವನ್ನು ಸರಿಪಡಿಸಿದ ಕೀರ್ತಿ ವಚನಕಾರ್ತಿಯರಿಗೆ ಸಲ್ಲುತ್ತದೆ. ಅಂತಹ ವಚನಕಾರ್ತಿಯರಲ್ಲಿ ಧೂಪದ ಗೊಗ್ಗವ್ವೆ ಕೂಡ ಒಬ್ಬಳು.

ಇಂದಿನ ಕೇರಳ ರಾಜ್ಯದ ಅವಲೂರು ಗ್ರಾಮದ ಶಿವಭಕ್ತ ದಂಪತಿಗಳ ಉದರದಲ್ಲಿ ಜನಿಸಿದ ಗೊಗ್ಗವ್ವೆಯ ಕಾಲಮಾನ 1160.. ಬಾಲ್ಯದಿಂದಲೇ ವೈರಾಗ್ಯವನ್ನು ತಾಳಿದ್ದ ಗೊಗ್ಗವ್ವೆ ಪ್ರಾಪ್ತ ವಯಸ್ಸಿಗೆ ಬಂದಾಗ ಆಕೆಗೆ ಮದುವೆ ಮಾಡಲು ಆಕೆಯ ಪಾಲಕರು ಪ್ರಯತ್ನಿಸಿದರು. ತಂದೆ ತಾಯಿಯ ಒತ್ತಾಯ ಹೆಚ್ಚಿದಾಗ ಆಕೆ ಮದುವೆ ಬೇಡವೆಂದು ನಿರಾಕರಿಸಿ ಮನೆಯಿಂದ ಓಡಿ ಹೋಗಿ ಗೊಗ್ಗಳೇಶ್ವರ ದೇವಾಲಯದ ಶಿವಲಿಂಗದ ಹಿಂದೆ ಅಡಗಿಕೊಳ್ಳುತ್ತಾಳೆ. ಆಕೆಯ ಇಚ್ಛೆಗೆ ವಿರುದ್ಧವಾಗಿ ವಿವಾಹ ಮಾಡುವುದಿಲ್ಲ ಎಂದು ವಚನ ನೀಡಿ ಪಾಲಕರು ಆಕೆಯನ್ನು ಮರಳಿ ಮನೆಗೆ ಕರೆತರುತ್ತಾರೆ.

ಪತಿಯ ಸಹಕಾರದೊಂದಿಗೆ ಬದುಕುವ ಶರಣ ತಾಯ0ದಿರು ಒಂದು ಗುಂಪಿನಲ್ಲಿ ಇದ್ದರೆ, ದೇವರನ್ನೇ ಪತಿ, ಆತ್ಮಸಖ ಎಂದು ಭಾವಿಸಿ ಏಕಾಂಗಿಯಾಗಿ ಬದುಕಿದ ಶಿವಶರಣೆಯರದ್ದು ಮತ್ತೊಂದು ಗುಂಪು. ಈ ಎರಡನೇ ಗುಂಪಿನ ಶರಣೆಯರಲ್ಲಿ ಧೂಪದ ಗೊಗ್ಗವ್ವೆಯೂ ಒಬ್ಬಳು.

ಸಾಕ್ಷಾತ್ ಪರಶಿವನೇ ಈಕೆಯನ್ನು ಪರೀಕ್ಷಿಸಲು ಸುಂದರ ಯುವಕನ ರೂಪದಲ್ಲಿ ಬಂದು ಮದುವೆಯಾಗಲು ಕೇಳಿಕೊಂಡಾಗಲೂ ಕೂಡ ಆಕೆ ಸಂಸಾರದಲ್ಲಿ ತನಗೆ ಆಸಕ್ತಿಯಿಲ್ಲ, ಗುರುಲಿಂಗ ಜಂಗಮ ಪೂಜೆಯಲ್ಲಿ ಬದುಕನ್ನು ಸಾಗಿಸುವೆ ಎಂದು ನಿರಾಕರಿಸುತ್ತಾಳೆ. ಆಕೆಯ ದೈವ ಭಕ್ತಿಯನ್ನು ಕಂಡು ಶಿವನು ಆಕೆಯನ್ನು ಹಾರೈಸಿದ ಎಂದು ಕೂಡ ಹೇಳಲಾಗುತ್ತದೆ. ಮುಂದೆ ಕಲ್ಯಾಣಕ್ಕೆ ಆಗಮಿಸಿದ



ಗೊಗ್ಗವ್ವೆ ಅಲ್ಲಿಯೇ ತನ್ನ ಧೂಪದ ಕಾಯಕವನ್ನು ಮುಂದುವರಿಸುತ್ತಾಳೆ

ಬದುಕಿನಲ್ಲಿ ನಿಷ್ಠೆ,ಬದ್ಧತೆ,ಪ್ರಾಮಾಣಿಕತೆಯಂತಹ ಮೌಲ್ಯಗಳನ್ನು ಅಳವಡಿಸಿಕೊಂಡ ಗೊಗ್ಗವ್ವೆಯ ಕುರಿತು ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ ಹಾಗೂ ಗುರುರಾಜ ಚಾರಿತ್ರ ಪುರಾಣ ಕಾವ್ಯಗಳಲ್ಲಿ ಪ್ರಸ್ತಾಪವಿದೆ. ಭೈರವೇಶ್ವರ ಕಾವ್ಯದಲ್ಲಿ ಗೊಗ್ಗವ್ವೆಯ ಜೊತೆ ಚೇರಮರಾಯನ ಹೆಸರಿದ್ದು ಆತನಿಗೆ ಧೂಪದ ಹೊಗೆಯಲ್ಲಿಯೇ ಕೈಲಾಸದ ದಾರಿಯನ್ನು ಗೊಗ್ಗವ್ವೆ ತೋರಿದಳೆಂದು ಹೇಳಲಾಗುತ್ತದೆ.

ಗೊಗ್ಗವ್ವೆಯ ವಚನಗಳ ಅಂಕಿತನಾಮ ನಾಸ್ತಿನಾಥ ಈಕೆ ಒಟ್ಟು ಆರು ವಚನಗಳನ್ನು ರಚಿಸಿದ್ದಾಳೆ. ಆಕೆಯ ಅಂಕಿತ ನಾಮವನ್ನು ನೋಡಿದಾಗ ಉತ್ತರ ಭಾರತದ ಘೋರಖಪುರದಲ್ಲಿ ಪರಿಚಿತವಾಗಿದ್ದ ಶೈವ ಸಂಪ್ರದಾಯದ ನಾಥ ಪಂಥ ಎಂಬ ಸಂಯೋಜಿತ ವರ್ಗಕ್ಕೆ ಈಕೆ ಸೇರಿರಬಹುದು ಎಂದು ಊಹಿಸಬಹುದು. ಕರ್ನಾಟಕದಲ್ಲಿ ಈಗಲೂ ಸ್ಥಿತವಾಗಿರುವ ನಾಥ ಪಂಥದ ಮಠಗಳಲ್ಲಿ ಸನ್ಯಾಸಿಗಳು ಪ್ರತಿ ಹನ್ನೆರಡು ವರ್ಷಗಳಿಗೊಮ್ಮೆ ಗೋರಖಪುರದಿಂದಲೇ ನೇಮಿಸಲ್ಪಡುತ್ತಾರೆ. ಈಶ್ವರ, ಭೈರವ, ದತ್ತಾತ್ರೇಯ ದೇವರನ್ನು ನಾಥಪಂಥದ ಜನ ಪೂಜಿಸುತ್ತಾರೆ ಎಂಬುದು ಗಮನಾರ್ಹ.

ಗೊಗ್ಗವ್ವೆಯ ವಚನಗಳು ಸ್ತ್ರೀ ಪುರುಷ ಸಮಾನತೆ, ಲಿಂಗಾಂಗ ಸಾಮರಸ್ಯದಂತಹ ವಿಷಯಗಳನ್ನು ಚರ್ಚಿಸುತ್ತವೆ.

ಗಂಡು ಮೋಹಿಸಿ ಹೆಣ್ಣು ಹಿಡಿದದೆ
ಅದು ಒಬ್ಬರ ಒಡವೆ ಎಂದು ಅರಿಯಬೇಕು
ಹೆಣ್ಣು ಮೋಹಿಸಿ ಗಂಡು ಹಿಡಿದಡೆ
ಉತ್ತರವಾವುದೆಂದರಿಯಬೇಕು
ಈ ಎರಡರ ಉಭಯವ ಕಳೆದು ಸುಖಿ ತಾನಾಗಬಲ್ಲಡೆ
ನಾಸ್ತಿನಾಥನು ಪರಿಪೂರ್ಣನೆಂಬೆ

ಈ ವಚನವು ಸ್ತ್ರೀ ಸಮಾನತೆಗೆ ಬರೆದ ವಾಕ್ಯದಂತಿದ್ದು ಸಮಾಜದಲ್ಲಿರುವ ಆಚರಣೆ, ನಂಬಿಕೆಗಳನ್ನು ಮುಂದಿಟ್ಟುಕೊಂಡು ಮಾತನಾಡುವ ಗೊಗ್ಗವ್ವೆ ಗಂಡೊಂದು ಹೆಣ್ಣನ್ನು ಮೋಹಿಸಿದಾಗ ಆಕೆ ಅವನ ಒಡವೆಯಾಗುತ್ತಾಳೆ , ಅದೇ ರೀತಿ ಹೆಣ್ಣೊಬ್ಬಳು ಗಂಡನ್ನು ಮೋಹಿಸಿದಾಗ ಆತನೇಕೆ ಆಕೆಯ ಒಡವೆ ಆಗುವುದಿಲ್ಲವೇಕೆ? ಎಂದು ಪ್ರಶ್ನಿಸುತ್ತಾಳೆ... ಮುಂದುವರೆದು ಲಿಂಗ ಸಮಾನತೆ ಮತ್ತು ಲಿಂಗ ರಾಜಕಾರಣದ ಬಗ್ಗೆ ಹೊಸ ರೀತಿಯ ಪ್ರತಿಭಟನೆಯನ್ನು ಮಾಡುತ್ತಾಳೆ.

ಈಕೆಯ ಮತ್ತೊಂದು ವಚನದಲ್ಲಿ
ಮಾರುತದಲ್ಲಿ ಬೆರೆತ ಗಂಧದಂತೆ
ಸುರತದಲ್ಲಿ ಬೆರೆತ ಸುಖದಂತೆ
ಮಚ್ಚಿನಲ್ಲಿ ಕೊಡುವ ಉಚಿತದಂತೆ
ಭಕ್ತರಿಗದೆ ಹಾದಿ ಎಂದೇ ನಾಸ್ತಿನಾಥ

ಅಲಂಕಾರಿಕವೆಂಬಂತೆ ತೋರುವ ಈ ವಚನದಲ್ಲಿ ಅನುಭವ ದೊಡ್ಡದು. ಗಂಧವು ಗಾಳಿಯಲ್ಲಿ ಬೆರೆತಾಗಲೇ ಅದರ ಸುಗಂಧ ಹೆಚ್ಚು ಆದರಂತೆಯೇ ಗಂಡು–ಹೆಣ್ಣು ಕೂಡಿದಾಗಲೇ ಸುರತ ಸುಖದ ಅರಿವಾಗುತ್ತದೆ ಎಂದು ಲೌಕಿಕ ಉದಾಹರಣೆಗಳ ಮೂಲಕ ಆಕೆ ಆಧ್ಯಾತ್ಮವನ್ನು ಹೇಳುತ್ತಾಳೆ. ಶರಣರು ಸತ್ಯವನ್ನು ನುಡಿಯುವುದರ ಮೂಲಕ ಭಾವವನ್ನು ಗೆದ್ದರು. ಹಾಗಾಗಿ ಸತ್ಯವು ಶರಣರ ಶಕ್ತಿಯಾಗಿ ಗುರುತಿಸಲ್ಪಟ್ಟಿದೆ ಇದನ್ನೇ ಗೊಗ್ಗವ್ವೆ ತನ್ನ ವಚನದಲ್ಲಿ ಎತ್ತಿ ಹಿಡಿದಿದ್ದಾಳೆ.

ಚದ್ರೂಪನನ್ನು ಅರಿಯುವುದಕ್ಕೆ ಇಷ್ಟಲಿಂಗಾರ್ಚನೆಯನ್ನು, ಊರ್ಧ್ವಮುಖವಾಗಿ ಷಟಸ್ಥಲ ಸಾಧನೆಯನ್ನು ಮಾಡಬೇಕು. ಹೀಗೆ ಮಾಡದೆ ಹೋದರೆ ಆ ಚೈತನ್ಯ ಸ್ವರೂಪ ಶಿವನನ್ನು ಕಾಣಲು ಸಾಧ್ಯವಿಲ್ಲ ಎಂದು ಆಕೆ ಹೇಳುತ್ತಾಳೆ. ಗುರುಲಿಂಗ ಜಂಗಮ ಸೇವೆಗೆ ತನ್ನನ್ನು ಇಡಿಯಾಗಿ ಅರ್ಪಿಸಿಕೊಂಡ ಧೂಪದ ಗೊಗ್ಗವ್ವೆ ವೈರಾಗ್ಯ ನಿಧಿಯಾಗಿ ಕಂಗೊಳಿಸುತ್ತಾಳೆ. ಮುಂದೆ ಕಲ್ಯಾಣದ ಕ್ರಾಂತಿಯ ನಂತರ ಶರಣರೆಲ್ಲರೂ ಕಲ್ಯಾಣದಿಂದ ಚದುರಿ ಹೋಗುತ್ತಾರೆ. ಹಾಗೆ ಧೂಪದ ಗೊಗ್ಗವ್ವೆ ಕೂಡ ಇಂದಿನ ಬೀದರ್ ಜಿಲ್ಲೆಯ ಔರಾದ್ ತಾಲೂಕಿನ ಧೂಪದ ಮಹಗಾಂವ್ ಎಂಬ ಗ್ರಾಮದಲ್ಲಿ ನೆಲೆಸುತ್ತಾಳೆ. ಮಹಗಾಂವ್ ಗ್ರಾಮಕ್ಕೆ ಧೂಪದ ಮಹ ಗಾಂವ್ ಎಂಬ ಹೆಸರು ಬಂದದ್ದು ಕೂಡ ಗೊಗ್ಗವ್ವೆಯ ಕಾಯಕದ ಕಾರಣದಿಂದ ಎಂದು ಹೇಳಲಾಗುತ್ತದೆ. ಈ ಗ್ರಾಮದಲ್ಲಿ ಇಂದಿಗೂ ಕೂಡ ವೀರ ವಿರಾಗಿಣಿ ಗೊಗ್ಗವ್ವೆ ತಾಯಿಯ ದೇವಾಲಯ ಹಾಗೂ ಕೆರೆಯನ್ನು ನಾವು ಕಾಣಬಹುದು.



ವೀಣಾ ಹೇಮಂತ್ ಗೌಡ ಪಾಟೀಲ್
ಮುಂಡರಗಿ ಗದಗ್

# ಅಂತರಾಳವೇ ರಹಸ್ಯದ ಗೂಡು

## ಸ್ನೇಹಲೋಕ

ಮಾನಸಿಕ ಸಮಸ್ಯೆ ನಿಧಾನವಾಗಿ ಪ್ರಾರಂಭವಾಗಿ ಕೊನೆಯ ಘಟ್ಟದಲ್ಲಿ ಜಾಸ್ತಿಯಾಗುತ್ತದೆ! ಆದರೆ ದೈಹಿಕ ಸಮಸ್ಯೆ ಸುಸ್ತು, ಜ್ವರ ಶೀಘ್ರವಾಗಿ ಬಂದು ಅಷ್ಟೇ ಬೇಗ ಮಾಯವಾಗುತ್ತದೆ!

ದೈಹಿಕ ಸಮಸ್ಯೆ ಹಾಗು ಮಾನಸಿಕ ಸಮಸ್ಯೆ ಎರಡೂ ಒಂದಕ್ಕೊಂದು ಪೂರಕವಾಗಿವೆ!

ತುಂಬಾ ದೀರ್ಘವಾದ ದೈಹಿಕ ಸಮಸ್ಯೆಯಿಂದ ವ್ಯಕ್ತಿ ಬಳಲುತ್ತಿದ್ದರೆ ಅದು ಮಾನಸಿಕ ಸಮಸ್ಯೆಯಾಗಿ ಪರಿಣಮಿಸುತ್ತದೆ! ಅದೇ ರೀತಿ ಯಾವುದೋ ಕಾರಣದಿಂದ ಮಾನಸಿಕ ಸಮಸ್ಯೆ ಉಂಟಾದಾಗ ದೈಹಿಕ ಆರೋಗ್ಯದ ಕಡೆಗೆ ಗಮನ ಕೊಡದೆ ಹೋದಾಗ ಸರಿಯಾಗಿ ಊಟ, ನಿದ್ದೆ ಇಲ್ಲದೆ ಅದು ದೇಹದ ಆರೋಗ್ಯವನ್ನು ಹಾಳುಗೆಡುವುತ್ತದೆ! ಹೀಗಾಗಿ ದೈಹಿಕ ಹಾಗೂ ಮಾನಸಿಕ ಸಮಸ್ಯೆಗಳು ಜೀವನದಲ್ಲಿ ಒಂದೊಂದು ಬಾರಿ ದುರಂತಕ್ಕೆ ಕಾರಣವಾಗುತ್ತವೆ, ಆಗ ವ್ಯಕ್ತಿ ಆತ್ಮಹತ್ಯೆಗೂ ಪ್ರಯತ್ನಿಸಬಹುದು!

ಮಾನಸಿಕ ಸಮಸ್ಯೆಯ ಬಗ್ಗೆಯೇ ನಾನು ಇಲ್ಲಿ ಜಾಸ್ತಿ ಒತ್ತು ಕೊಟ್ಟು ಹೇಳಲು ಬಯಸುತ್ತೇನೆ!

ಮಾನಸಿಕ ಸಮಸ್ಯೆಯನ್ನು ನಾವು ಎರಡು ರೀತಿಯಲ್ಲಿ ವಿಭಾಗಿಸಬಹುದು!

ಒಂದು ಆಂತರಿಕ ಸಮಸ್ಯೆ, ಒಂದು ಮನದಾಳದ ಸಮಸ್ಯೆ ಎಂದು!

ನೀವು ಕೇಳಬಹುದು ಇವೆರಡೂ ಒಂದೇ ಅಲ್ಲವೇ ಎಂದು ! ಆದರೆ ಆಂತರಿಕ ಸಮಸ್ಯೆ ಅಂತರಂಗದಲ್ಲಿ ಅಡಗಿರುತ್ತದೆ ಅದು ಯಾರ ಕಣ್ಣಿಗೂ ಬೀಳುವುದಿಲ್ಲ, ವ್ಯಕ್ತಿ ತನ್ನಲ್ಲೇ ಇಟ್ಟುಕೊಳ್ಳುವ ಅತಿ ರಹಸ್ಯದ ಕೊರಗು, ಅದನ್ನು ವ್ಯಕ್ತಿ ಯಾವತ್ತೂ ಹೊರಗೆ ಹಾಕಲು ಇಷ್ಟ ಪಡುವುದಿಲ್ಲ!

ಅದಕ್ಕೆ ಕಾರಣ ಏನೋ ಇರಬಹುದು, ತಮ್ಮ ಗೌರವಕ್ಕೆ ಕುಂದು ಬರಬಹುದೆಂದೋ ಅಥವಾ ಎಲ್ಲಿ ಬೇರೆಯವರ ಅಪಹಾಸ್ಯಕ್ಕೆ ಈಡಾಗಬಹುದೆಂದೋ ಒಟ್ಟಿನಲ್ಲಿ ಆ ನೋವನ್ನು ಅತಿಯಾಗಿ ತಡೆದುಕೊಂಡು ಅಂತರಂಗದ ನೋವನ್ನು ಜೀವಪರ್ಯಂತ ಅಂತರಾಳದಲ್ಲೇ ಹುದುಗಿಸಿರುತ್ತಾರೆ!

ಹೀಗಾಗಿ ಅದನ್ನು ಅಷ್ಟು ಸುಲಭವಾಗಿ ಹೊರಗೆಳೆಯಲು ಸಾಧ್ಯವಿಲ್ಲ, ಆದರೆ ಅವರ ಮನಸ್ಥಿತಿಯ ಮೇಲೆ ಗಂಭೀರ ಪರಿಣಾಮ ಬೀರಿ ಅವರ ಆರೋಗ್ಯ ಹಾಳಾಗುತಿದ್ದರೆ ಆಗ ವೈದ್ಯರು ಆ ವ್ಯಕ್ತಿಯನ್ನು ಸಮ್ಮೋಹನ ಸ್ಥಿತಿಗೆ ತೆಗೆದುಕೊಂಡು ಹೋಗಿ ಅವರ ಒಳ ಮನಸ್ಥಿತಿಯನ್ನು ಅರಿತು ಅವರನ್ನು ಆ ಸಮಸ್ಯೆಯಿಂದ ಹೊರಗೆ ತರಲು ಪ್ರಯತ್ನಿಸುತ್ತಾರೆ!

ಆದರೆ ಮನದ ಸಮಸ್ಯೆ ಅಷ್ಟು ಗಂಭೀರವಾಗಿರುವುದಿಲ್ಲ ಯಾರಾದರೂ ಮನಸ್ಸಿಗೆ ತುಂಬಾ ಆಪ್ತತೆ ಹೊಂದಿದವರು ಸ್ವಲ್ಪ ಪ್ರೀತಿ, ಕಾಳಜಿಯಿಂದ ಕೇಳಿದರೆ ಸಾಕು ವ್ಯಕ್ತಿ ತನ್ನ ಸಮಸ್ಯೆಯನ್ನು ಹೇಳಿಕೊಂಡು ಮನಸ್ಸನ್ನು ಹಗುರಗೊಳಿಕೊಳ್ಳುತ್ತಾನೆ!

ಹೀಗಾಗಿ ಅಂತರಂಗದ ನೋವು ತೀರಾ ಆಳಕ್ಕಿಳಿದದ್ದು,

ಮನದಾಳದ ನೋವು ಸ್ವಲ್ಪವೇ ಚರ್ಮದ ಗಾಯದಂತೆ!

ಗಂಭೀರ ಪರಿಸ್ಥಿತಿಗಳು, ಗಂಭೀರ ಪರಿಣಾಮಗಳು ಮನಸ್ಸಿಗೆ ಸಿಡಿಲು ಬಡಿದಂತೆ ಬಡಿದು ವ್ಯಕ್ತಿ ಮಾನಸಿಕ ಒತ್ತಡದಿಂದ ಬಳಲುತ್ತಾನೆ!



ಸ್ನೇಹಾ ಆನಂದ್



# ಮನುಷ್ಯ ನಕ್ಕಾಗ ಭೂಮಿ ಅಳುವುದು...

## ಮನದ 5 ಮಾತು

ಮನುಷ್ಯ ಸಂಭ್ರಮಿಸಿದಾಗೊಮ್ಮೆ ನಿಸರ್ಗ ಅಳುತ್ತದೆ ಕೇಳಲು ಕೊಂಚ ವಿಚಿತ್ರವಾದರೂ ಇದು ಸತ್ಯ. ಅಯ್ಯೋ ಅದು ಹೇಗೆ ....ಮನುಷ್ಯನ ಸಂಭ್ರಮಗಳೇನು? ಹುಟ್ಟುಹಬ್ಬ,ಮದುವೆಯ ಸಮಾರಂಭಗಳು,ಹಬ್ಬ ಹರಿದಿನ ಪೂಜೆ ಉತ್ಸವಗಳು ಸಾರ್ವಜನಿಕ ಸಮಾರಂಭಗಳು. ಹೀಗೆ ಮನುಷ್ಯ ಯಾವಾಗ ಯಾವಾಗ ನಗುತ್ತಾಲ್ಲವೇ ಅವಾಗ ಅವಾಗ ಈ ಭೂಮಿ ತಾಯಿ ಅಳುತ್ತಾಳೆ. ಅದು ಹೇಗೆ ಎನಿಸಬಹುದು. ನಾವು ಮದುವೆಗಳಿಗೆ ಪಾರ್ಟಿ ಸಮಾರಂಭ ಉತ್ಸವಗಳಿಗೆ ಹೋಗುತ್ತೇವೆ. ಅಲ್ಲಿರುವಷ್ಟು ಕಾಲ ಅದೊಂದು ಸಂಭ್ರಮವೇ ಸರಿ ಮಿಣಿಮಿಣಿ ಬೆಳಕಿದನ ಲೈಟಿನ ದೀಪಗಳು, ಸಾಲಂಕೃತ ವಿವಿಧ ವಿನ್ಯಾಸದ ಹೂವಿನ ಅಲಂಕಾರಗಳು,ನೀರಿನ ಬಾಟಲ್ ಗಳು ಶುದ್ಧತೆಯ ಮತ್ತು ಬದ್ಧತೆಯ ಆಹಾರ ಬಡಿಸುವ ಕ್ರಮಗಳು ಎಲ್ಲರಿಗೂ ಪ್ರತ್ಯೇಕವಾದ ಲೋಟ ಚಮಚ ತಟ್ಟೆಗಳು ಪುನರುಪಯೋಗಿಸದ ನವೀನ ವಸ್ತುಗಳು ಸಾಕಷ್ಟು ಸಂಭ್ರಮವನ್ನು ಮುದವನ್ನು ಕೊಡುತ್ತದೆ. ಆದರೆ ಈ ಸಂಭ್ರಮ ಎಲ್ಲಾ ಮುಗಿದ ಮೇಲೆ ಜನ ಖಾಲಿಯಾದ ಮೇಲೆ ಒಂದು ಬಾರಿ ಇದನ್ನು ನೋಡಬೇಕು...ಹೈಜೀನ್ ಹೆಸರಿನಲ್ಲಿ ಅರ್ಧ ಕುಡಿದ ಪ್ಲಾಸ್ಟಿಕ್ ನೀರಿನ ಬಾಟಲ್ ಗಳು, ಅಲಂಕಾರದ ಹೆಸರಿನಲ್ಲಿ ಹೂಬಾಡದಿರಲಿ ಎಂದು ಸಿಕ್ಕಿಸುವ ಸ್ಪಂಜಿನ ತುಂಡುಗಳು, ತಂತಿಗಳು ಪ್ಲಾಸ್ಟಿಕ್ ವಯರ್ ಗಳು,ಪ್ಲಾಸ್ಟಿಕ್ ತಟ್ಟೆ, ಲೋಟ ಪ್ಲಾಸ್ಟಿಕ್ ಹೂಗಳು ಅರ್ಧಂಬರ್ಧ ಉಳಿದ ಆಹಾರ ಪದಾರ್ಥಗಳು ಉಡುಗೊರೆಯನ್ನು ಅಲಂಕರಿಸಿದ ಬಣ್ಣ ಬಣ್ಣದ ಮಿಂಚಿನ ಹಾಳೆಗಳು ಹೀಗೊಂದು ಅಲ್ಲಿ ಕಸದ ತಿಪ್ಪೆ ತಯಾರಾಗಿರುತ್ತದೆ. ಆ ಕಸದ ತಿಪ್ಪೆಯನ್ನು ಕರಗಿಸಲು ಭೂಮಿ ನೂರಾರು ವರ್ಷ ಶ್ರಮಿಸಬೇಕು. ಇದಲ್ಲದೆ ಇನ್ನೊಂದು ಅತಿಯಾಗಿ ಅಲಂಕಾರಕ್ಕೆ ಬಳಸುವ ಮಿಣಿಮಿಣಿ ದೀಪಗಳು ಮತ್ತು ದೊಡ್ಡ ದೊಡ್ಡ ಶಬ್ದಗಳ ಧ್ವನಿವರ್ಧಕಗಳು,, ಪಟಾಕಿ ಸುತ್ತಲಿರುವ ಹಲವು ಜೀವಿಗಳಿಗೆ ವಾತಾವರಣದ ಹವಾಮಾನಕ್ಕೆ, ಶಬ್ದ ಮಾಲಿನ್ಯಕ್ಕೆ ಕಾರಣ.ಇವೆಲ್ಲವೂ ಪರಿಸರ ಕಲುಷಿತ ಮಾಡಲು ಒಂದು ಸಾಧನ. ಅದಕ್ಕೆ ಮನುಷ್ಯ ನಕ್ಕಾಗೊಮ್ಮೆ ಭೂಮಿ ಅಳುತ್ತದೆ. ಅದರ ಅರಿವು ಕೂಡ ನಮಗಿಲ್ಲ. ಸನ್ಮಾನಕ್ಕಾಗಿ ಬಳಸುವ ಪ್ಲಾಸ್ಟಿಕ್ ಹಾರಗಳು ತುರಾಯಿಗಳು ಪ್ಲಾಸ್ಟಿಕ್ ಕವರ್ ಗಳು ಹಣ್ಣಿನ ಪ್ಲಾಸ್ಟಿಕ್ ಬುಟ್ಟಿಗಳು ದಿನ ದಿನವು ಕಸದ ತಿಪ್ಪೆಯನ್ನು ರಾಶಿ ರಾಶಿಯಾಗಿ ಮಾರ್ಪಾಡಿ ಸುತ್ತಲೇ ಇರುತ್ತದೆ. ಇದಲ್ಲದೆ ಇತ್ತೀಚಿನ ದಿನಗಳಲ್ಲಿ ಅತಿ ಅಲಂಕಾರ ಪ್ರಿಯರಾಗಿ , ಮನುಷ್ಯ ತನ್ನ ಉಗುರಿನಲ್ಲಿ, ಬಟ್ಟೆಗಳಲಿ ಕೂಡ ಹಲವು ಮೈಕ್ರೋ ಪ್ಲಾಸ್ಟಿಕಿನಿಂದ ಮಾಡಿದ ಮಣಿ ಮುತ್ತು ಹೂ ಚಿಟ್ಟೆಗಳನ್ನು ಅಳವಡಿಸಿಕೊಳ್ಳುತ್ತಾನೆ. ವಿವಿಧ ವಿನ್ಯಾಸದಿಂದ ಕಸೂತಿ ಮಾಡಿದ ಬಟ್ಟೆಗಳನ್ನು ಧರಿಸುತ್ತಾನೆ. ಕಲೆಯಲ್ಲಿರುವ ಪ್ಲಾಸ್ಟಿಕ್ ಮುತ್ತುಗಳು ಅಲಂಕಾರಿಕ ಸೂಕ್ಷ್ಮ ಸಣ್ಣ ಸಣ್ಣ ಕೊಳವೆಗಳು ಯಾವುದಾದರು ಒಂದ ರೂಪದಲ್ಲಿ ಮೈಕ್ರೋ ಪ್ಲಾಸ್ಟಿಕ ರೂಪದಿ ಆಹಾರದಲ್ಲಿ ಕೂಡ ಸೇರಬಹುದು ಎಂಬ ಸಣ್ಣ ಪ್ರಜ್ಞೆ ಕೂಡ ನಮಗೆ ಇರುವುದಿಲ್ಲ.ಚಂದಗಾಣಬೇಕು ಅಂದಗಾಣಬೇಕು ಎಂದು ನಮ್ಮ ಬುದ್ಧಿ ಮಂದವಾಗುತ್ತಿದೆ. ಇದು ಒಂದೆಡೆಯಾದರೆ ಮನುಷ್ಯ ತನ್ನ ಬೇಸರವನ್ನು ಕಳೆಯಲು ಸಮುದ್ರದಂಡೆಗಳಿಗೆ ನೀರಿನ ತಾವುಗಳ ದಡಗಳಿಗೆ ಹೋಗುತ್ತಾನೆ.ತನ್ನ ಬೇಸರವೇನೋ ಕಳೆದುಕೊಳ್ಳುತ್ತಾನೆ ಆದರೆ ದಂಡೆಯ ಮೇಲೆ ವಿಪುಲವಾಗಿ ಪ್ಲಾಸ್ಟಿಕ್ ಬಾಟಲ್ ಗಳು ಪಾನೀಯಗಳ ಕ್ಯಾನ, ಟೀನ್ ಗಳು ಸಿಗರೇಟ್ ನ ತುಂಡು ಮಧ್ಯಪಾನದ ಬಾಟಲಿಗಳು ಹೀಗೆ ಎಲ್ಲೆಲ್ಲಿ ಹೋಗುತ್ತಾನೆ ಅಲ್ಲಿ ಕಸದ ತಿಪ್ಪೆಯನ್ನು ಮಾಡಿ ಬರುತ್ತಾನೆ. ಅದಲ್ಲದೆ ಜಂಕ್ ಫುಡ್ಗಳಾದ ಚಿಪ್ಸ್ ನಂತಹ ಆಹಾರ ಪದಾರ್ಥಗಳ ಚೀಲಗಳು ಹೇರಳವಾಗಿ ನೀರಿನ ಮೂಲಗಳನ್ನು ಸೇರಿ ಜಲಚರಗಳ ಆರೋಗ್ಯಕ್ಕೂ ಹಾನಿ ಮಾಡುತ್ತವೆ. ಆದರೆ ಇದನ್ನೆಲ್ಲವನ್ನು ಮರೆತು ನಮ್ಮನ್ನು ನಾವು ನಾಗರಿಕರು ಎಂದು ಹೇಳಿಕೊಳ್ಳುತ್ತೇವೆ. ಇದನ್ನು ಬದಲಾವಣೆ ಬೆಳವಣಿಗೆ ಎಂದು ಕರೆಯುತ್ತೇವೆ. ಹೈಜೀನ್ ಎಂಬ ಹೆಸರಿನಲ್ಲಿ ಪ್ರಕೃತಿಯನ್ನು ಹಾನಿ ಮಾಡುವುದು ಎಷ್ಟು ಸರಿ

ನಾವು ಸೇರಿಸುವ ಈ ಪ್ಲಾಸ್ಟಿಕ್ ತ್ಯಾಜ್ಯ ಮಣ್ಣು ಪಾಲಾಗಲು ನೂರಾರು ವರ್ಷಗಳೇ ಬೇಕು. ಯಾತ್ರೆಗಳು ತೀರ್ಥ ಸ್ಥಾನಗಳು ಎಂದು ನದಿ ಮೂಲಗಳಿಗೆ ಹೋಗುತ್ತೇವೆ.ಅಲ್ಲಿ ಸಾಬೂನು,ಬಳಸಿದ ಬಟ್ಟೆ ಮನೆಯಲ್ಲಿರುವ ಹಳೆ ಹಳೆಯ ಮೂರ್ತಿಗಳು ಮತ್ತು ಚೌಕಟ್ಟು ಹಾಕಿದ ದೇವರ ಪಟಗಳನ್ನ ವಿಸರ್ಜಿಸಿ ಬರುತ್ತೇವೆ. ನಿಜಕ್ಕೂ ಹೀಗೆ ಮಾಡುವುದರಿಂದ ನಮ್ಮ ಪಾಪ ಕಳೆದು ಹೋಗುತ್ತದೆಯಾ!? ಇದನ್ನು ನಾವು ಒಮ್ಮೆ ಯೋಚಿಸಲೇಬೇಕಾದ ವಿಷಯವಲ್ಲವೇ, ಈ ಭೂಮಿ ಕೇವಲ ಮಾನವನ ಸುಖ ವೈಭೋಗಕ್ಕೆ ನಿರ್ಮಾಣವಾಗಿಲ್ಲ. ಭೂಮಿಯಮೇಲೆ ಬದುಕುವ ಹಕ್ಕು ಪ್ರತಿಯೊಬ್ಬ ಜೀವಿಗೂ ಇದೆ. ಮಾನವ ಪ್ರಕೃತಿಗೆ ಹೊಂದಿಕೊಂಡು ಬದುಕುವ ಕಲೆಯನ್ನ ರೂಢಿಸಿಕೊಳ್ಳಬೇಕು. ಅತಿಯಾದ ಸೌಲಭ್ಯಗಳು ಪರಿಸರ ಹಾನಿ ಮಾಡುತ್ತಿವೆ. ದೇವಸ್ಥಾನಕ್ಕೆ ಹೋಗುವ ಭಕ್ತರು ಅಲ್ಲಿರುವ ಪರಿಸರದ ಶುದ್ಧತೆ ಕಾಪಾಡಬೇಕು ಅದು ಭಗವಂತನ ಮನೆ ಅಲ್ಲವೆ... ಅಲ್ಲಿ ನಾವು ಕಸ ಹಾಕುವದೇ...ಮನುಷ್ಯ ನಿಜವಾದ ಅರ್ಥದಲ್ಲಿ ಭಗವಂತನನ್ನು ಕಾಣಬೇಕಾದರೆ ಚಿತ್ತ ಶುದ್ದಿ ದೇಹ ಶುದ್ದಿ ಸ್ಥಳ ಶುದ್ದಿ ಇವು ಮೂರರ ಅಗತ್ಯವೂ ಇರಬೇಕು. ಆದರೆ ಈಗ ಪ್ರತಿಯೊಂದು ಯಾತ್ರಾಸ್ಥಳವು ವ್ಯಾಪಾರಿ ಕೇಂದ್ರಗಳಾಗಿ ಬಿಟ್ಟಿವೆ. ಹಲವು ಸಂಪ್ರದಾಯಗಳು ಆಡಂಬರಗಳಾಗಿವೆ. ಹಳೆಯ ಕಾಲದಿಂದಲೂ ಯಾರಾದರೂ ಮನೆಗೆ ಬಂದರೆ ಅರಿಶಿಣ ಕುಂಕುಮ ಕೊಡುವ ಪದ್ಧತಿ ಇದೆ. ಆದರೆ ಅದರ ಮೂಲ ಸ್ವರೂಪವನ್ನು ಮರೆತು ಅರಿಶಿನ ಕುಂಕುಮದ ಪ್ಲಾಸ್ಟಿಕ್ ಚೀಟುಗಳನ್ನು ಕೊಡುತ್ತೇವೆ.ನಿಜಕ್ಕೂ ಅವುಗಳನ್ನು ತೆರೆದು ಯಾರಾದರೂ ಬಳಸುತ್ತಾರೆಯಾ.. ಇಲ್ಲ!ಯಾರು ಬಳಸುವುದಿಲ್ಲ. ಆದರೆ ಹೀಗೆ ಕೊಡುವದರಿಂದ ಸಂಪ್ರದಾಯ ಮೌಲ್ಯವನ್ನು ಕಳೆದುಕೊಳ್ಳುತ್ತಿಲ್ಲವೇ? ಅದಲ್ಲದೆ ಉಡಿ ತುಂಬುವ ಸಂಪ್ರದಾಯ. ಮೊದಲಿನ ಕಾಲದಲ್ಲಿ ಈಗಿನಷ್ಟು ದವಸ ಧಾನ್ಯಗಳು ವಿಪುಲವಾಗಿ ಇರುತ್ತಿರಲಿಲ್ಲ. ಮನೆಗೆ ಯಾರಾದರೂ ಬಂದರೆ ಬೊಗಸೆಯಿಂದ ಎರಡು ಹಿಡಿ,ಎರಡು ಬೊಗಸೆ ಅಕ್ಕಿಯನ್ನು ಅವರ ಸೀರೆಯ ಸೆರಗಿನ ಉಡಿಯೊಳಗೆ ಹಾಕುತ್ತಿದ್ದರು . ಅದರ ಜೊತೆಗೆ ಬೆಲ್ಲವು ಕೊಬ್ಬರಿಯೂ ಅವರ ಅನುಕೂಲ ತಕ್ಕಂತೆ ಇಡುತ್ತಿದ್ದರು.. ಅದು ಅವರ ಒಪ್ಪತ್ತಿನ ಊಟಕ್ಕಾಗಲಿ ಅಂತ ಅಥವಾ ಇರುವದರಲ್ಲಿಯೇ ದಾನ ಮಾಡಬೇಕು ಎಂಬ ಚಿಂತನೆ. ಆದರೆ ಸಣ್ಣ ಸಣ್ಣ ಪ್ಲಾಸ್ಟಿಕ್ ನಲ್ಲಿ ಅಕ್ಕಿ ಹಾಕಿ ಉಡಿ ಪಾಕೆಟ್ ಎಂದು ಮಾಡುತ್ತಾರೆ.

ನಿಜವಾಗಿಯೂ ಇದರಿಂದ ಯಾರಿಗಾದರೂ ಊಟ ಸಾಧ್ಯವೇ!? ಹೋಗಲಿ ಪ್ರಾಣಿ ಪಕ್ಷಿಗಳಿಗಾದರೂ ಬಳಕೆಯಾಗುತ್ತವೆಯಾ ಇಲ್ಲ! ಇವು ಪರಿಸರಕ್ಕೆ ಹಾನಿ. ಇನ್ನೂ ಹಿಂದಿನ ಕಾಲದಲ್ಲಿ ಅನುಕೂಲ ಇದ್ದವರು ಮಾತ್ರ ಮನೆಗೆ ಬಂದವರಿಗೆ ಖಣವನ್ನು ಬಾಗಿನವಾಗಿ ಅಥವಾ ಉಡುಗೊರೆಯಾಗಿ ಕೊಡುವ ಸಂಪ್ರದಾಯವಿತ್ತು. ಅದು ನೂಲಿನಿಂದ ನೇಯ್ದ ಉತ್ತಮ ಬಟ್ಟೆ ಆಗಿರುತ್ತಿತ್ತು.

ಆದರೆ ಈಗ ಯಾವುದಕ್ಕೂ ಉಪಯೋಗ ಬರಲಾರದಂತ ಬ್ಲೌಸ್ ಪೀಸ್ ಗಳನ್ನ ಪರಸ್ಪರ ಉಡುಗೊರೆ ನೀಡುತ್ತಾರೆ. ಅದು ಗುಣಮಟ್ಟದ್ದು ಆಗಿರುವುದಿಲ್ಲ ಒಬ್ಬರ ಮನೆಯಿಂದ ಇನ್ನೊಬ್ಬರ





ಮನೆಗೆ ವರ್ಗಾವಣೆ ಆಗುತ್ತದೆ. ಈ ರೀತಿ ಅರ್ಥವನ್ನು ಕಳೆದುಕೊಂಡು ಸಂಪ್ರದಾಯವನ್ನು ಆಚರಿಸುವುದರಲ್ಲಿ ಯಾವ ತತ್ವ ಅಡಗಿದೆ!? ಇನ್ನು ಮದುವೆಗಳಲ್ಲಿ ತೆಂಗಿನಕಾಯಿ ಅರಶಿಣ ಕುಂಕುಮ ಚಂದದ ಸಾಮಾನುಗಳ ಪ್ರತಿರೂಪವನ್ನು ಪುಟ್ಟ ಪುಟ್ಟದಾಗಿ ಕೊಡುತ್ತಾರೆ ಅವು ನೈಜವಾಗಿಯೂ ಇರುವುದಿಲ್ಲ.ಅಂತಹವು ಮನೆಗೆ ಹೋದರೆ ಕಸವಾದೀತುವಿನಹ ಉಪಯೋಗಕ್ಕೆ ಬರುವುದಿಲ್ಲ. ಹೀಗೆ ಪೊಟ್ಟಣದಲ್ಲಿ ಅರಿಶಿನ ಕುಂಕುಮವನ್ನು ಅಲಂಕರಿಸಿ ಕೊಡಬೇಕೆಂಬ ಯಾವ ಸಂಪ್ರದಾಯವು ಇಲ್ಲ. ನಮ್ಮ ಸಂಭ್ರಮಗಳಲ್ಲಿ ಈ ಪರಿಸರವನ್ನು ಹಾನಿ ಮಾಡಿದರೆ ಅದರ ಪರಿಣಾಮವನ್ನು ಕೂಡ ನಾವೇ ಅನುಭವಿಸಬೇಕಾಗುತ್ತದೆ.

ಕೆಲವು ಗಮನಿಸಲೇಬೇಕಾದ ವಿಷಯಗಳು.

- **ಆದಷ್ಟು ಎಲ್ಲಿಯಾದರೂ ಸಮಾರಂಭಕ್ಕೆ ಹೋದಾಗ ನಿಮ್ಮ ಸ್ಟೀಲ್ ಬಾಟಲನ್ನು ನಿಮ್ಮ ಜೊತೆಗೆ ಕೊಂಡು ಹೋಗಿ.**
- **ಅರಿಶಿನ ಕುಂಕುಮ ಕೊಡುವಾಗ ಬಟ್ಟಲದಿಂದ ನೇರವಾಗಿ ಅವರಿಗೆ ಕೊಡಿ ಅದರ ಚೀಟಿಗಳನ್ನು ವಿತರಿಸುವ ಅಗತ್ಯ ಇಲ್ಲ.**
- **ಮನೆಗೆ ಬಂದವರಿಗೆ ಉಪಯೋಗಕ್ಕೆ ಬಾರದ ಬ್ಲೌಸ್ ಪೀಸ್ ಗಳನ್ನು ಕೊಡುವುದನ್ನು ನಿಲ್ಲಿಸಿ ಅದರ ಬದಲಾಗಿ ನೀವು ಎರಡು ರೂಪಾಯಿ ನಾಣ್ಯ, ಬೆಲ್ಲದ ಅಚ್ಚು, ಕೊಬ್ಬರಿ ತುಂಡು ಏನಾದರೂ ನೀಡಬಹುದು. ಇವೆಲ್ಲವೂ ಲಕ್ಷ್ಮಿ ಸ್ವರೂಪವೇ, ಮೌಲ್ಯಕ್ಕಿಂತ ಮಾನ ದೊಡ್ಡದು.**
- **ಅಡಿಕೆಯ ಚೀಟು ಬದಲಾಗಿ ನೇರವಾಗಿ ಅಡಿಕೆಯ ಹೋಳುಗಳನ್ನು ಇಡಿ ಇದರಿಂದ ಅನಗತ್ಯ ಪ್ಲಾಸ್ಟಿಕ್ ಬಳಕೆಯನ್ನು ತಪ್ಪಿಸಬಹುದು**
- **ತೀರ್ಥ ಸ್ನಾನಗಳಲ್ಲಿ ಬಟ್ಟೆಗಳನ್ನು ವಿಸರ್ಜಿಸುವುದು ಮನೆಯ ಹಳೆಯ ದೇವರ ಸಾಮಾನುಗಳನ್ನು ವಿಸರ್ಜಿಸುವುದು ನಿಲ್ಲಿಸಬೇಕು. ತೀರ್ಥ ಸ್ಥಾನಗಳನ್ನ ಗಲೀಜು ಮಾಡುವುದರಿಂದ ಪಾಪ ಅಂಟಿ-ಕೊಳ್ಳುತ್ತದೆ.**
- **ಎಲ್ಲೆಂದರಲ್ಲಿ ಗುಟಕಾ, ಪಾನ್ ಬಿಡಾಗಳನ್ನು ತಿಂದು ಪಿಚಕ್ ಪಿಚಕ್ ಎಂದು ಉಗುಳುವುದನ್ನು ಸರ್ಕಾರವೇ ನಿರ್ಬಂಧಿಸಬೇಕು**
- **ದೇವಸ್ಥಾನದ ಪ್ರಾಂಗಣಗಳಲ್ಲಿ ಶುದ್ಧತೆಗೆ ಹೆಚ್ಚು ಪ್ರಾಧ್ಯಾನತೆ ಇದೆ ಅದಕ್ಕೆ ನಾವು ಬದ್ಧರಾಗಿ ವ್ಯವಹರಿಸಬೇಕು.**
- **ಸಮಾರಂಭಗಳಲ್ಲಿ ಸಾಧ್ಯವಾದಷ್ಟು ಬಳಸು ಚೆಲ್ಲುವ ಲೋಟ ತಟ್ಟೆ ಬಾಟಲಿಗಳ ಬಳಕೆ ಕಡಿಮೆ ಮಾಡಬೇಕು.**
- **ಬೆಲ್ಲ, ತೆಂಗಿನಕಾಯಿ , ದಕ್ಷಿಣ, ಉಡುಗೊರೆ, ತಾಂಬುಲ ಇವೆಲ್ಲ ಲಕ್ಷ್ಮಿ ಸ್ವರೂಪಗಳಾದದ್ದ-ರಿಂದ ಸುಮ್ಮನೇ ನೇರವಾಗಿ ಕೊಡಿ ಅಲಂಕ-ರಿಸುವ ಅಗತ್ಯವಿಲ್ಲ**
- **ಕೃತಕ ಹೂವುಗಳು, ಅತಿಯಾದ ಜಗಮಗಿಸುವ ಲೈಟುಗಳ ಬಳಕೆಗಳನ್ನ ಕಡಿಮೆ ಮಾಡಬೇಕು.**
- **ಪಿಕ್ನಿಕ್ ಎಂದು ನದಿ ಮೂಲಗಳಿಗೆ ಸಾಗರ ದಡಗಳಿಗೆ ಹೋದಾಗ ನಾವು ಮಾಡಿದ ಕಸಕ್ಕೆ ನಾವೇ ಜವಾಬ್ದಾರಿಯಾಗಿ ಅದನ್ನ ಸರಿಯಾದ ಮೂಲಕ್ಕೆ ಸೇರಿಸಬೇಕು.ಅಲ್ಲಿ ಎಸೆದು ಬರಬಾರದು.**

ಇದೆಲ್ಲದರ ಒಟ್ಟಿಗೆ ಮಾನಸಿಕ ಪ್ರಜ್ಞೆ ಮತ್ತು ವೈಯಕ್ತಿಕ ಜವಾಬ್ದಾರಿ, ಈ ದೇಶ ನಮ್ಮದು ಇದನ್ನು ಸ್ವಚ್ಛವಾಗಿ ಇಡುವುದು ನಮ್ಮ ಕರ್ತವ್ಯ ಎಂಬ ಅರಿವು ಇರಲಿ. ಎಲ್ಲಂದರೆ ಕಸ ಕಡ್ಡಿಗಳನ್ನು ಹಾಕದಂತೆ ಎಚ್ಚರ ವಹಿಸಬೇಕೆನ್ನುವ ಅರಿವು ನಮ್ಮ ಅಂತರಂಗದಲ್ಲಿ ಮೂಡಿದಾಗ ಮಾತ್ರ ನಾವು ನಾಗರಿಕರು. ಪ್ರಕೃತಿ ಅಳುವುದನ್ನ ನಿಲ್ಲಿಸಬೇಕು

ಇಲ್ಲದಿದ್ದರೆ ನಮ್ಮ ಸಂಭ್ರಮದಲ್ಲಿ ಈ ಪರಿಸರ ಹಾನಿಯಾಗುತ್ತದೆ. ಮತ್ತಷ್ಟು ಮನದ ಮಾತು ನೊಂದಿಗೆ ಮತ್ತೆ ಮುಂದಿನ ವಾರ ಭೇಟಿಯಾಗೋಣ.



ಸಾಕ್ಷಿ ಶ್ರೀಕಾಂತ ತಿಕೋಟಿಕರ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,